# ಅಧಿಸೂಚನೆ

# ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆಎಸ್‌ಇಟಿ)–2021

[ಯು.ಜಿ.ಸಿ, ನವದೆಹಲಿಯಿಂದ ಮಾನ್ಯತೆ ಪಡೆದಿದೆ. F7-16/2012(NET/SET) Dated14th January, 2020]

ಮೈಸೂರು ವಿಶ್ವವಿದ್ಯಾನಿಲಯ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು–570 006.

**ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ(ಕೆಎಸ್‌ಇಟಿ)–2021ರ ಪರೀಕ್ಷೆಗೆ ಸಂಬಂಧಿಸಿದಂತೆ ದಿನಾಂಕ: 11ನೇ ಏಪ್ರೀಲ್, 2021ರಂದು ನಡೆಯುವ ಕೆಎಸ್‌ಇಟಿ (KSET) ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.**

**ಪ್ರಮುಖ ದಿನಾಂಕಗಳು:**

| | | |
|---|---|---|
| 1. ಅಧಿಸೂಚನೆಯ ದಿನಾಂಕ | : | **06ನೇ ಫೆಬ್ರವರಿ 2021** |
| 2. online ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | : | **08ನೇ ಫೆಬ್ರವರಿ 2021** |
| 3. online ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | 07ನೇ **ಮಾರ್ಚ್ 2021** |
| 4. ರೂ.250/–ರ ದಂಡ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | : | 13ನೇ **ಮಾರ್ಚ್ 2021** |
| 5. ಭರ್ತಿಮಾಡಿ ಮುದ್ರಿಸಿದ ಅರ್ಜಿಯೊಂದಿಗೆ ಹಾಜರಾತಿ ಪತ್ರವನ್ನು ಆಯ್ಕೆ ಮಾಡಿದ ನೊಡೆಲ್ ಕೇಂದ್ರಕ್ಕೆ ಸಲ್ಲಿಸಲು ಕೊನೆಯ ದಿನಾಂಕ | : | 15ನೇ **ಮಾರ್ಚ್ 2021** |
| 6. ಪರೀಕ್ಷಾ ದಿನಾಂಕ | : | **11ನೇ ಏಪ್ರಿಲ್ 2021** |

**ಅಭ್ಯರ್ಥಿಗಳು ಕೆಎಸ್‌ಇಟಿ – 2021ಕ್ಕೆ "online ಮೂಲಕ ಮಾತ್ರ ಅರ್ಜಿ ಸಲ್ಲಿಸಬಹುದು. ಯಾವುದೇ ಇತರ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. ಕೆಎಸ್‌ಇಟಿ ವೆಬ್‌ಸೈಟ್ http://kset.uni-mysore.ac.in ಅನ್ನು ಪ್ರವೇಶಿಸುವ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.**

**ಅರ್ಜಿಯನ್ನು ಸಲ್ಲಿಸುವ ಮುನ್ನ ಈ ಕೆಳಕಂಡ ಅಧಿಸೂಚನೆಯನ್ನು ಗಮನವಿಟ್ಟು ಓದಿ ನಂತರ ಅರ್ಜಿಯನ್ನು ಭರ್ತಿಮಾಡಬೇಕು.**

- ಕೆಎಸ್‌ಇಟಿ (**KSET**) 2021ರ ಪರೀಕ್ಷೆಯನ್ನು 41 ವಿಷಯಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ 11 (ಹನ್ನೊಂದು) ನೋಡಲ್ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.
- ಈ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯ/ ಪ್ರಥಮ ದರ್ಜೆ ಪದವಿ ಕಾಲೇಜು/ ಉನ್ನತ ಶಿಕ್ಷಣ ಸಂಸ್ಥೆ (ಸರ್ಕಾರಿ, ಅನುದಾನಿತ ಮತ್ತು ಖಾಸಗಿ) ಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಗೊಳ್ಳಲು ಅರ್ಹರಾಗಿರುತ್ತಾರೆ ಹಾಗೂ ಆಯಾ ಸಂಸ್ಥೆಗಳ ನಿಯಮ ಮತ್ತು ಕಾಯಿದೆಗಳಿಗೆ ಒಳಪಟ್ಟಿರುತ್ತಾರೆ.

- ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ವಿಕಲಚೇತನ (PWD) ಮತ್ತು ಇತರೆ ಹಿಂದುಳಿದ [OBCs] ಅಭ್ಯರ್ಥಿಗಳು, [ಪ್ರವರ್ಗ–I, IIA, IIB, IIIA, ಮತ್ತು IIIB] ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗದವರ ಪಟ್ಟಿಯಲ್ಲಿರುವಂತಿರಬೇಕು. **(bcdbng@kar.nic.in)**.

**ಅರ್ಹತಾ ನಿಬಂಧನೆಗಳು**

1. ಅಭ್ಯರ್ಥಿಗಳು ಯು.ಜಿ.ಸಿ.ಯಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾನಿಲಯ/ ಉನ್ನತ ಶಿಕ್ಷಣ ಸಂಸ್ಥೆಯಿಂದ ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಗಳಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಶೇ. 55% ರಷ್ಟು ಅಂಕಗಳನ್ನು (ಪೂರ್ಣಾಂಕಿತ ಗೊಳಿಸಿರಬಾರದು) ಪಡೆದಿರಬೇಕು, ಪರಿಶಿಷ್ಟ ಜಾತಿ (SC) /ಪರಿಶಿಷ್ಟ ಪಂಗಡ (ST) /ವಿಕಲಚೇತನರು (PWD) ಅಭ್ಯರ್ಥಿಗಳು, ಪ್ರವರ್ಗ–I, IIA, IIB, IIIA ಮತ್ತು IIIB, ಗುಂಪಿಗೆ ಸೇರಿದ ಅಭ್ಯರ್ಥಿಗಳು ಶೇ. 50% ರಷ್ಟು ಅಂಕಗಳನ್ನು (ಪೂರ್ಣಾಂಕಿತ ಗೊಳಿಸಿರಬಾರದು) ಪಡೆದಿರಬೇಕು.

2. ಸ್ನಾತಕೋತ್ತರ ಪದವಿ ಪಡೆದವರು ಹಾಗೂ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ (ಪ್ರಥಮ ಮತ್ತು ದ್ವಿತೀಯ) ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ. ಆದರೆ, ಅಂತಹ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ತಾತ್ಕಾಲಿಕವಾಗಿ ಮಾತ್ರ ಪ್ರವೇಶ ನೀಡಲಾಗುವುದು ಮತ್ತು ಅವರು ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಯನ್ನು ಸಾಮಾನ್ಯ ವರ್ಗದವರು ಶೇ. 55% ರಷ್ಟು ಹಾಗೂ ಎಸ್.ಸಿ. / ಎಸ್.ಟಿ/ ವಿಕಲಚೇತನರು / ದೃಷ್ಟಿದೋಷವುಳ್ಳ / ಪ್ರವರ್ಗ–I, IIA, IIB, IIIA ಮತ್ತು IIIB, ಅಭ್ಯರ್ಥಿಗಳು ಶೇ.50% ರಷ್ಟು ಅಂಕ ಪಡೆದು, ಅರ್ಹತೆ ಹೊಂದಿದಾಗ ಮಾತ್ರ ಅಂತಹ ಅಭ್ಯರ್ಥಿಗಳು, ಕೆಎಸ್ಇಟಿ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ ಎರಡು ವರ್ಷದೊಳಗಾಗಿ ಅವರ ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳನ್ನು ಸಲ್ಲಿಸಿದರೆ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪ್ರಮಾಣ ಪತ್ರ ಪಡೆಯಬಹುದು. ಇಲ್ಲವಾದಲ್ಲಿ ಅಂತಹವರ ಅರ್ಹತೆಯನ್ನು ರದ್ದುಪಡಿಸಲಾಗುವುದು.

3. ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿದ ವಿಷಯದಲ್ಲಿಯೇ ಅಭ್ಯರ್ಥಿಗಳು ಕೆಎಸ್ಇಟಿ (**KSET**) ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಪ್ರಸ್ತುತ ಕೆಎಸ್ಇಟಿಯ ಪ್ರಕಟಣೆಯಲ್ಲಿ ಇಲ್ಲದಿರುವ ವಿಷಯಗಳಿಗೆ ಅಭ್ಯರ್ಥಿಗಳು ವರ್ಷದಲ್ಲಿ 2 ಬಾರಿ ನಡೆಯುವ ಯು.ಜಿ.ಸಿ ಎನ್.ಇ.ಟಿ ಅಥವಾ ಯು.ಜಿ.ಸಿ–ಸಿ.ಎಸ್.ಐ.ಆರ್–ಎನ್.ಇ.ಟಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.

4. ಪಿಎಚ್.ಡಿ ಪದವಿ ಪಡೆದವರು ಹಾಗೂ 1991ರ ಸೆಪ್ಟೆಂಬರ್ 19ರೊಳಗೆ ಸ್ನಾತಕೋತ್ತರ ಪರೀಕ್ಷೆಯನ್ನು ಪೂರ್ಣಗೊಳಿಸಿರುವವರು (ಫಲಿತಾಂಶ ಘೋಷಣೆಯ ದಿನಾಂಕವನ್ನು ಲೆಕ್ಕಿಸದೆ) ಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಒಟ್ಟು ಅಂಕಗಳಲ್ಲಿ 5% ಕಡಿತವಿರುತ್ತದೆ (i.e. from 55% to 50%).

5. ಆನ್‌ಲೈನ್ ಅರ್ಜಿ ನಮೂನೆಯನ್ನು ಸಲ್ಲಿಸಲು ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮೊದಲು ಸಮರ್ಥ ಅಧಿಕಾರಿಗಳು ನೀಡುವ ವರ್ಗ ಪ್ರಮಾಣಪತ್ರಗಳು. [SC, ST, CAT-I, IIA, IIB, IIIA ಮತ್ತು IIIB]ಅಭ್ಯರ್ಥಿಗಳಿಗೆ ಮಾತ್ರ. ಯಾವುದೇ ಹಂತದಲ್ಲಾದರೂ ಕೆಎಸ್ಇಟಿ ಪ್ರಾಧಿಕಾರವು ಅಮಾನ್ಯ ಪ್ರಮಾಣಪತ್ರದ ಕಾರಣದಿಂದಾಗಿ ಅವರ ಅನರ್ಹತೆ

ಪತ್ತೆಯಾದರೆ, ಅವರ ಉಮೇದುವಾರಿಕೆಯನ್ನು ಪೂರ್ವ ಸೂಚನೆ ಇಲ್ಲದೆ ರದ್ದುಗೊಳಿಸಲಾಗುತ್ತದೆ ಮತ್ತು ಕಾನೂನು ಕ್ರಮಕ್ಕೆ ಅವರು ಹೊಣೆಗಾರರಾಗಿರುತ್ತಾರೆ.

6. ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ, ಹೊರರಾಜ್ಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಕ್ಕೆ ಸೇರಿದ [SC, ST & OBC] ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯನ್ನು ಸಾಮಾನ್ಯ ವರ್ಗದಡಿಯಲ್ಲಿ [GM] ಮಾತ್ರ ತೆಗೆದುಕೊಳ್ಳಬೇಕು.
7. ಅಭ್ಯರ್ಥಿಗಳು ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಅವರ ಅಭ್ಯರ್ಥಿತನವು ತಾತ್ಕಾಲಿಕವೆಂದು ಬಾವಿಸಿಕೊಳ್ಳತಕ್ಕದ್ದು. ಪ್ರವೇಶಾತಿ ಪಡೆದಾಕ್ಷಣ ಕೆಎಸ್‌ಇಟಿ ಕೇಂದ್ರವು ಅವರನ್ನು ಅಭ್ಯರ್ಥಿಯಾಗಿ ಅರ್ಹರೆಂದು ಪರಿಗಣಿಸಿದೆ ಎಂದು ತಿಳಿಯಬಾರದು. ಅಭ್ಯರ್ಥಿಗಳ ಅರ್ಹತಾ ನಿಬಂಧನೆಗಳನ್ನು ಪರಿಶೀಲಿಸಿದ ನಂತರ ಅವರ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದು.
8. ಈಗಾಗಲೇ ಕೆಎಸ್‌ಇಟಿ (**KSET**) ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಮುಂಬರುವ ಕೆಎಸ್‌ಇಟಿ ಪರೀಕ್ಷೆಗೆ ಅದೇ ವಿಷಯದಲ್ಲಿ (Same Subject) ಅರ್ಜಿ ಸಲ್ಲಿಸುವಂತಿಲ್ಲ. ಕೆಎಸ್‌ಇಟಿ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಿದ್ದು ಕಂಡು ಬಂದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳ ಅರ್ಹತೆಯನ್ನು ರದ್ದುಗೊಳಿಸಲಾಗುವುದು ಹಾಗೂ ಅವರು ಹಿಂದೆ ಪಡೆದಿರುವ ಕೆಎಸ್‌ಇಟಿ ಪರೀಕ್ಷೆಯ ಅರ್ಹತೆಯನ್ನು ಕೂಡ ಡಿನೋಟಿಫಿಕೇಷನ್ ಮೂಲಕ ಹಿಂಪಡೆಯಲಾಗುವುದು.
9. ಭಾರತೀಯ ವಿಶ್ವವಿದ್ಯಾಲಯ/ ಸಂಸ್ಥೆ ನೀಡುವ ಸ್ನಾತಕೋತ್ತರ ಡಿಪ್ಲೊಮಾ/ ಪ್ರಮಾಣಪತ್ರ ಅಥವಾ ವಿದೇಶಿ ವಿಶ್ವವಿದ್ಯಾಲಯ/ ಸಂಸ್ಥೆ ನೀಡುವ ವಿದೇಶಿ ಪದವಿ/ ಡಿಪ್ಲೊಮಾ ಪ್ರಮಾಣಪತ್ರ ಹೊಂದಿರುವ ಅಭ್ಯರ್ಥಿಗಳು ತಮ್ಮ ಹಿತದೃಷ್ಠಿಯಿಂದ, ಮಾನ್ಯತೆ ಪಡೆದ ಭಾರತೀಯರ ಸ್ನಾತಕೋತ್ತರ ಪದವಿಯೊಂದಿಗೆ ತಮ್ಮ ಡಿಪ್ಲೊಮಾ/ ಪದವಿ /ಪ್ರಮಾಣಪತ್ರದ ಸಮಾನತೆಯನ್ನು ಖಚಿತಪಡಿಸಿಕೊಳ್ಳಬೇಕು [ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್(ಎಐಯು), ನವದೆಹಲಿ].

**ವಯೋಮಿತಿ:**

**1. ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ ತೆಗೆದುಕೊಳ್ಳಲು ಗರಿಷ್ಠ ವಯೋಮಿತಿ ಇರುವುದಿಲ್ಲ.**

**ವಿನಾಯಿತಿ**

1. ಕರ್ನಾಟಕ ರಾಜ್ಯದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವಿಶ್ವವಿದ್ಯಾನಿಲಯ/ ಪ್ರಥಮ ದರ್ಜೆ ಕಾಲೇಜುಗಳು/ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ಸರ್ಕಾರಿ/ ಅನುದಾನಿತ/ ಖಾಸಗಿ) ನೇಮಕವಾಗಬೇಕಾದರೆ, ಅಭ್ಯರ್ಥಿಗಳು ಕಡ್ಡಾಯವಾಗಿ ಕೆಎಸ್‌ಇಟಿ ಅಥವಾ ಎನ್.ಇ.ಟಿ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರಬೇಕೆಂಬ ನಿಯಮವಿದೆ.

   ಅ. ಯು.ಜಿ.ಸಿ ಕಾಲಕಾಲಕ್ಕೆ ಹೊರಡಿಸುವ ನಿಬಂಧನೆಗಳು, ಯು.ಜಿ.ಸಿ. ಮಾರ್ಗಸೂಚಿಗಳು ಮತ್ತು ಅಧಿನಿಯಮಗಳ ಅನ್ವಯ ಕೆಎಸ್‌ಇಟಿ ಅರ್ಹತೆ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು.

ಆ. ಅಭ್ಯರ್ಥಿಯು 1989ರ ಮುಂಚಿತವಾಗಿ ಯು.ಜಿ.ಸಿ–ನೆಟ್ / ಸಿ.ಎಸ್.ಐ.ಆರ್–ನೆಟ್, ಜೆ.ಆರ್.ಎಫ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹವರಿಗೆ ಕೆಎಸ್ಇಟಿ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

ಇ. ಕೆಎಸ್ಇಟಿ ಅಭ್ಯರ್ಥಿಗಳಿಗೆ: 1ನೇ ಜೂನ್, 2002ಕ್ಕಿಂತ ಮೊದಲೇ ನಡೆಸಲಾದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಅಭ್ಯರ್ಥಿಗಳಿಗೆ ಕೆಸೆಟ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ. ಅಂತಹ ಅಭ್ಯರ್ಥಿಗಳು ಭಾರತದಲ್ಲಿ ಎಲ್ಲಿಯಾದರೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬಹುದು. 1ನೇ ಜೂನ್, 2002ರ ನಂತರ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಆ ರಾಜ್ಯದ ವಿಶ್ವವಿದ್ಯಾನಿಲಯಗಳು/ ಪ್ರಥಮದರ್ಜೆ ಕಾಲೇಜುಗಳಲ್ಲಿ ಮಾತ್ರ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

**ಪರೀಕ್ಷಾ ಶುಲ್ಕ ಮತ್ತು ಪಾವತಿಸುವ ವಿಧಾನ**

| | |
|---|---|
| ಸಾಮಾನ್ಯ ವರ್ಗ | ರೂ. 1150/– |
| ಪ್ರವರ್ಗ– IIA, IIB, IIIA, IIIB | ರೂ. 950/– |
| ಪ್ರವರ್ಗ– I, SC, ST, PWD | ರೂ. 650/– |

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ನಿಗಧಿತ ಅವಧಿ ಮುಗಿದ ನಂತರ ಪ್ರಕಟಣೆಯಲ್ಲಿ ನಮೂದಿಸಿರುವ ದಿನಾಂಕದೊಳಗೆ ರೂ. 250/– ದಂಡಶುಲ್ಕ ಪಾವತಿ ಮಾಡಿ ಹೆಚ್ಚುವರಿಯಾಗಿ ನಿಗದಿ ಪಡಿಸಿರುವ ಅವಧಿಯವರೆಗೆ ಅರ್ಜಿಯನ್ನು ಸಲ್ಲಿಸಬಹುದು.

**ಪಾವತಿಸುವ ವಿಧಾನ:**

KSET ವೆಬ್‌ಸೈಟ್‌ನಲ್ಲಿ ಪೇಮೆಂಟ್ ಬಟನ್ನು ಕ್ಲಿಕ್ ಮಾಡುವ ಮೂಲಕ, ಪಾವತಿಸುವ ಮಾರ್ಗವನ್ನು (GM/ CAT-IIA, IIB, IIIA, IIIB/ CAT-1, SC, ST, PWD) ಆಯ್ಕೆಮಾಡಿ ಮತ್ತು ಲಭ್ಯವಿರುವ ಎಲ್ಲಾ ಮಾಹಿತಿಯನ್ನು ಎಚ್ಚರಿಕೆಯಿಂದ ನಮೂದಿಸಿ. ನಮೂದಿಸಿದ ವಿವರಗಳನ್ನು ಮತ್ತು ಪಾವತಿಸಬೇಕಾದ ಮೊತ್ತವನ್ನು ಪರಿಶೀಲಿಸಿ ಮತ್ತು State Bank MOPS (Multi Option Payment System) ಮೂಲಕ ಪಾವತಿ ಮಾಡಲು ಮುಂದುವರಿಯಿರಿ.

ಪಾವತಿ ಆಯ್ಕೆಗಳು:

1. **ಎಲ್ಲಾ ಬ್ಯಾಂಕ್‌ಗಳ ಇಂಟರ್ನೆಟ್ ಬ್ಯಾಂಕಿಂಗ್**
2. **ಎಲ್ಲಾ ಬ್ಯಾಂಕ್‌ಗಳ ಡೆಬಿಟ್ ಕಾರ್ಡ್**
3. **ಎಲ್ಲಾ ಬ್ಯಾಂಕ್‌ಗಳ ಕ್ರೆಡಿಟ್ ಕಾರ್ಡ್**
4. **ಸ್ಟೇಟ್ ಬ್ಯಾಂಕ್‌ಗಳ ಬಡ್ಡಿ ಇ–ವಾಲೆಟ್ ಪಾವತಿ**
5. **SBI ಶಾಖೆಯನ್ನು ಕ್ಲಿಕ್ ಮಾಡುವುದರ ಮೂಲಕ ನಗದು ಪಾವತಿ ಮಾಡಬಹುದು, ಚಲನ್ನು ಆನ್‌ಲೈನ್‌ನಲ್ಲಿ ಮುದ್ರಿಸಿದ ನಂತರ ಎಲ್ಲಾ SBI ಶಾಖೆಗಳಲ್ಲಿ ಪಾನ್ ಇಂಡಿಯಾದಲ್ಲಿ ಪಾವತಿಸಬಹುದು (ನಗದು/ SBI ಚೆಕ್‌ಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ).**

**ಸೂಚನೆ**

1. **ಬೇರೆ ಯಾವುದೇ ವಿಧಾನದ ಮೂಲಕ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ (Money Order, Demand Draft, IPO etc.,).**
2. **ಒಮ್ಮೆ ಶುಲ್ಕ ಪಾವತಿಸಿದ ನಂತರ, ಯಾವುದೇ ಕಾರಣಕ್ಕೂ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.**

**ಪರೀಕ್ಷಾ ವಿಧಾನ:**

ಕೆಎಸ್‌ಇಟಿ (**KSET**) ಪರೀಕ್ಷೆಯಲ್ಲಿ ಎರಡು ಪ್ರಶ್ನೆಪತ್ರಿಕೆಗಳಿರುತ್ತವೆ. ಎರಡು ಪತ್ರಿಕೆಗಳು ಸಹ ಬಹುಸಂಖ್ಯಾ ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಪರೀಕ್ಷೆಯು **ದಿನಾಂಕ:** 11ನೇ **ಏಪ್ರಿಲ್, 2021** ರಂದು ಎರಡು ಅವಧಿಗಳಲ್ಲಿ ಈ ಕೆಳಕಂಡಂತೆ ನಡೆಯುವುದು.

| | **ಪತ್ರಿಕೆ** | **ಅಂಕಗಳು** | **ಪ್ರಶ್ನೆಗಳ ಸಂಖ್ಯೆ** | **ಅವಧಿ** |
|---|---|---|---|---|
| **ಮೊದಲನೇ ಅವಧಿ** | I | 100 | 50 ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ | 1 ಗಂಟೆ (09.30 ರಿಂದ 10.30 ರವರೆಗೆ) |
| **ಎರಡನೇ ಅವಧಿ** | II | 200 | 100 ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ | 2 ಗಂಟೆ (11.00 ರಿಂದ 01.00 ರವರೆಗೆ) |

**ಪತ್ರಿಕೆ–I: ಸಾಮಾನ್ಯ ಪತ್ರಿಕೆಯು ಬೋಧನೆ ಮತ್ತು ಬುದ್ಧಿ ಸಾಮಾರ್ಥ್ಯಕ್ಕನುಗುಣವಾಗಿರುತ್ತದೆ.**

ಈ ಪತ್ರಿಕೆಯು ಅಭ್ಯರ್ಥಿಗಳ ಸಾಮಾನ್ಯ ಪತ್ರಿಕೆಯಾಗಿದ್ದು, ಸಾಮಾನ್ಯ ಜ್ಞಾನ, ಬೋಧನೆ ಹಾಗೂ ಸಂಶೋಧನೆಯ ಅಭಿರುಚಿಗೆ ಸಂಬಂಧಿಸಿರುತ್ತದೆ. ಅಭ್ಯರ್ಥಿಗಳ ಸಾಮಾನ್ಯ ತಿಳಿವಳಿಕೆಗಳನ್ನು ಗ್ರಹಿಸುವ ಹಾಗೂ ಯೋಚನಾ ಸಾಮರ್ಥ್ಯವನ್ನು ಅಳೆಯುವಂತಹದ್ದಾಗಿರುತ್ತದೆ. ಈ ಪತ್ರಿಕೆಯು 50 ಬಹುಸಂಖ್ಯಾ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೆ ಎರಡು ಅಂಕಗಳಿರುತ್ತದೆ ಹಾಗೂ ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಬೇಕಾಗಿರುತ್ತದೆ.

**ಪತ್ರಿಕೆ–II : ವಿಷಯ ಪತ್ರಿಕೆ.**

ಅಭ್ಯರ್ಥಿಯು ಆಯ್ಕೆ ಮಾಡಿದ ವಿಷಯದ ಸಾಮಾನ್ಯ ಜ್ಞಾನದಲ್ಲಿ ಈ ಪತ್ರಿಕೆಯು ಇರುತ್ತದೆ. ಈ ಪತ್ರಿಕೆಯು 100 ಕಡ್ಡಾಯ ಬಹುಸಂಖ್ಯಾ ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೂ 2 ಅಂಕಗಳಿರುತ್ತದೆ. ಗರಿಷ್ಠ 200 ಅಂಕಗಳಿರುತ್ತವೆ.

ಪರೀಕ್ಷೆಯಲ್ಲಿ ಪ್ರಶ್ನೆ ಪುಸ್ತಕದ ಜೊತೆಗೆ ನೀಡುವ ಪೇಪರ್–I ಮತ್ತು ಪೇಪರ್–II ರ ಓ.ಎಂ.ಆರ್. ಹಾಳೆಯಲ್ಲಿ ನಿಗದಿ ಪಡಿಸಿದ ನಮೂನೆಯಲ್ಲಿಯೇ ಉತ್ತರಗಳನ್ನು ಗುರುತಿಸಬೇಕು.

**ಕೆಎಸ್‌ಇಟಿ (KSET) ಪರೀಕ್ಷೆಯ ಫಲಿತಾಂಶ ಪ್ರಕಟಣೆಯ ವಿಧಾನ:**

**(Revised Qualifying criteria for UGC-NET to be implemented for SET vide letter No. F.4-2/90(NET), dated 14th August, 2018, is final and binding).**

ಅಭ್ಯರ್ಥಿಗಳು ಕೆಎಸ್‌ಇಟಿ (KSET) ಪರೀಕ್ಷೆಯಲ್ಲಿ ಅರ್ಹತೆ ಪಡೆಯುವ ಸಲುವಾಗಿ ಫಲಿತಾಂಶ ಪ್ರಕಟಣೆಯ ನಿಯಮ ಮತ್ತು ಹಂತಗಳು, ಈ ಕೆಳಕಂಡ ಹಂತಗಳನ್ನು ಒಳಗೊಂಡಿರುತ್ತದೆ.

ಸಹಾಯಕ ಪ್ರಾಧ್ಯಾಪಕರ ಅರ್ಹತೆಯ ಆಯ್ಕೆ ಪಟ್ಟಿಗಾಗಿ ಅಭ್ಯರ್ಥಿಗಳು ಪೇಪರ್ – ೧ ಮತ್ತು ಪೇಪರ್ – ೨ ಪತ್ರಿಕೆಗಳ ಒಟ್ಟು ಮೊತ್ತದಲ್ಲಿ ಕನಿಷ್ಠ ಅಂಕಗಳನ್ನು ಪಡೆಯಬೇಕು. ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

<table>
<tr><th rowspan="2">CATEGORY</th><th colspan="2">MINIMUM MARKS (%) TO BE OBTAINED</th></tr>
<tr><th>PAPER - I</th><th>PAPER - II</th></tr>
<tr><td>GENERAL [GM]</td><td colspan="2">40% Aggregate marks in all the two papers taken together</td></tr>
<tr><td>SC / ST/ CAT-I / II A/ II B / III A / III B / PWD</td><td colspan="2">35% Aggregate marks in all the two papers taken together</td></tr>
</table>

**ಹಂತ I**: ಸಹಾಯಕ ಪ್ರಾಧ್ಯಾಪಕರ ಅರ್ಹತೆಗಾಗಿ ಅರ್ಹತೆ ಪಡೆದ ಅಭ್ಯರ್ಥಿಗಳ ಸಂಖ್ಯೆ [Total Slots]. ಕೆಎಸ್ಇಟಿಯ ಎರಡು ಪತ್ರಿಕೆಗಳಲ್ಲಿ ಹಾಜರಾದ 6% ಅಭ್ಯರ್ಥಿಗಳ ಸಂಖ್ಯೆಗೆ ಸಮನಾಗಿರುತ್ತದೆ.

**ಹಂತ II:** ಬಂದ ಒಟ್ಟು ಸ್ಲಾಟ್‌ಗಳಲ್ಲಿ, ಎರಡೂ ಪತ್ರಿಕೆಗಳಲ್ಲಿ ಹಾಜರಾಗಿರಬೇಕು. ಸ್ಟೆಪ್ ಒಂದನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಒಟ್ಟು ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ವಿಷಯವಾರು ಮತ್ತು ಪ್ರವರ್ಗವಾರು ತಯಾರಿಸಲಾಗುತ್ತದೆ.

ಸಹಾಯಕ ಪ್ರಾಧ್ಯಾಪಕರ ಅರ್ಹತೆಯನ್ನು ಪರಿಗಣಿಸಬೇಕಾದರೆ, ಪತ್ರಿಕೆ–**I ಮತ್ತು** ಪತ್ರಿಕೆ–**II ರಲ್ಲೂ ಹಾಜರಾಗಿ,** GM ಅಭ್ಯರ್ಥಿಗಳು ಎರಡೂ ಪತ್ರಿಕೆಯಲ್ಲಿ ಶೇ.40 ಅಂಕಗಳು ಮತ್ತು ಮೀಸಲಾತಿ ವ್ಯಾಪ್ತಿಗೆ ಬರುವ ಪ.ಜಾ/ಪ.ಪಂ, ಇತರೆ ಹಿಂದುಳಿದ ವರ್ಗ ಮತ್ತು ವಿಕಲಚೇತನ (SC/ST, OBC and PWD) ಅಭ್ಯರ್ಥಿಗಳು ಎರಡೂ ಪತ್ರಿಕೆಯಲ್ಲಿ ಶೇ.35 ಅಂಕಗಳನ್ನು ಗಳಿಸಿರಬೇಕು. ಅಂತಹ ಅಭ್ಯರ್ಥಿಗಳನ್ನು ಮಾತ್ರ ಅರ್ಹತಾ ಆಯ್ಕೆ ಪಟ್ಟಿಗೆ ಪರಿಗಣಿಸಲಾಗುವುದು. ಅಭ್ಯಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ತಯಾರಿಸಲಾಗುವುದು. ಯುಜಿಸಿಯ ಫಲಿತಾಂಶದ ಸೂತ್ರದ ಪ್ರಕಾರ ಸ್ಲಾಟ್‌ಗಳನ್ನು ತಯಾರಿಸಿ, ರಾಜ್ಯ ಸರ್ಕಾರದ ಮೀಸಲಾತಿ ನೀತಿಯ ಅನುಸಾರವಾಗಿ ಲೆಕ್ಕಚಾರ ಮಾಡಿ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಫಲಿತಾಂಶವನ್ನು ಪ್ರಕಟಿಸಲಾಗುವುದು.

**ಈ ಮೇಲೆ ತಿಳಿಸಿದ ಫಲಿತಾಂಶದ ಪ್ರಕಟಣೆಯ ವಿಧಾನವು ಕೆಎಸ್ಇಟಿ ನಿಬಂಧನೆಗಳಿಗೆ ಬದ್ದವಾಗಿರುತ್ತದೆ, ಈ ಸಂಬಂಧ ಕೆ.ಎಸ್.ಇ.ಟಿ. ತೀರ್ಮಾನವೇ ಅಂತಿಮವಾಗಿರುತ್ತದೆ.**

**ಹಂತ III: ಯುಜಿಸಿಯ ನಿರ್ದೇಶನದ ಪ್ರಕಾರ, ಹಾಜರಾಗುವ ಅಭ್ಯರ್ಥಿಗಳಲ್ಲಿ ಶೇಕಡ 6ರಷ್ಟು ಅಭ್ಯರ್ಥಿಗಳಿಗೆ ಮಾತ್ರ ಸಹಾಯಕ ಪ್ರಾಧ್ಯಾಪಕರಿಗೆ ಅರ್ಹರು ಎಂದು ಪರಿಗಣಿಸಲಾಗುವುದು. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನೀತಿಯನ್ನು ಅನುಸರಿಸಿ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಸ್ಲಾಟ್ಸ್‌ಗಳನ್ನು ತಯಾರಿಸಲು ಬಳಸಲಾಗುತ್ತದೆ.**

**ಈ ಕೆಳಕಂಡ ಸೂತ್ರದ ಪ್ರಕಾರ ವಿಷಯವಾರು ಹಾಗೂ ವರ್ಗವಾರು ಹಂಚಿಕೆ ಮಾಡಲಾಗುವುದು.**

$$\text{No. of Slots in a subject For General (Unreserved) Candidates} = \frac{\text{No. of General (UR) candidates who have Secured 40\% or more marks in aggregate in the subject}}{\text{Total No. of General (UR) candidate who have Secured 40\% or moremarks in Aggregate over all subjects}} \times \text{Total No. of slots available under General (UR) category}$$

**ಆದ್ದರಿಂದ, ಆನ್‌ಲೈನ್ ಅರ್ಜಿ ನಮೂನೆಯಲ್ಲಿ ವರ್ಗವನ್ನು ಸರಿಯಾಗಿ ನಮೂದಿಸಬೇಕು. (ಅನ್‌ಲೈನ್ ಅರ್ಜಿಯಲ್ಲಿ ವರ್ಗ, ವಿಷಯ ಮತ್ತು ಕೇಂದ್ರ ಇತ್ಯಾದಿಗಳ ಬದಲಾವಣೆಯನ್ನು ಪರಿಗಣಿಸಲಾಗುವುದಿಲ್ಲ.)**

**ಮೇಲಿನ ಅರ್ಹತಾ ಮಾನದಂಡಗಳು ಅಂತಿಮ ಮತ್ತು ಯುಜಿಸಿಯು ನಿರ್ಧರಿಸಿದ ನಿಯಮಗಳಿಗೆ ಬದ್ಧವಾಗಿರುತ್ತವೆ.**

**ಕೆಎಸ್‌ಇಟಿ (KSET) ಪಠ್ಯಕ್ರಮ ಮತ್ತು ಪ್ರಶ್ನೆ ಪತ್ರಿಕೆ:**

a) **ಪರೀಕ್ಷಾ ಪಠ್ಯಕ್ರಮ:** ಕೆಎಸ್‌ಇಟಿ (**KSET**) ಪರೀಕ್ಷಾ ಪಠ್ಯಕ್ರಮವು, ಯು.ಜಿ.ಸಿ/ ಸಿ.ಎಸ್.ಐ.ಆರ್. ನೆಟ್ ನಿಗಡಿಪಡಿಸಿರುವ ಪಠ್ಯಕ್ರಮದ ಮಾದರಿಯಲ್ಲೇ ಇರುತ್ತದೆ. ಎಲ್ಲಾ ವಿಷಯಗಳ ಪಠ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್: http://kset.uni-mysore.ac.in ನಿಂದ Download ಮಾಡಿಕೊಳ್ಳಬಹುದು. ಕೆಎಸ್‌ಇಟಿ (**KSET**) ಕೇಂದ್ರವು ವಿಷಯಗಳ ಪಠ್ಯಕ್ರಮವನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಕಳುಹಿಸಲಾಗುವುದಿಲ್ಲ.

b) ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.

**ವಿಷಯಗಳು:**

**ವಿಷಯ ಮತ್ತು ಕೆಎಸ್‌ಇಟಿ ಪಠ್ಯಕ್ರಮ:** ಪತ್ರಿಕೆ I ಮತ್ತು ಪತ್ರಿಕೆ IIರ ಎಲ್ಲಾ ಪ್ರಶ್ನೆಗಳೂ ಕಡ್ಡಾಯವಾಗಿದ್ದು, ಪತ್ರಿಕೆ ಸಂಪೂರ್ಣ ಪಠ್ಯಕ್ರಮವನ್ನು (ಎಲ್ಲಾ ಎಲೆಕ್ಟೀವ್‌ಗಳನ್ನು ಒಳಗೊಂಡಂತೆ, ಆಯ್ಕೆಗಳಿಲ್ಲದೆ) ಒಳಗೊಂಡಿರುತ್ತದೆ. ಎಲ್ಲಾ ಕೆಎಸ್‌ಇಟಿ ವಿಷಯಗಳ ಪಠ್ಯಕ್ರಮವನ್ನು ಕೆಎಸ್‌ಇಟಿ http://kset.uni-mysore.ac.in ಅಂತರ್ಜಾಲದಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕೆ.ಎಸ್.ಇ.ಟಿ (**KSET**) ಪರೀಕ್ಷೆಯು 41 ವಿಷಯಗಳಿಗೆ ನಡೆಯಲಿದ್ದು, ಅವುಗಳ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ / ಆಂಗ್ಲ ಭಾಷೆಯಲ್ಲಿ ಹಾಗೂ ಆಯಾ ಭಾಷಾ ಮಾಧ್ಯಮದಲ್ಲಿರುತ್ತದೆ. 41 ವಿಷಯಗಳ ಹೆಸರು ಮತ್ತು ವಿಷಯಗಳ ಕೋಡ್ ಪಟ್ಟಿ ಈ ಕೆಳಕಂಡಂತಿರುತ್ತದೆ.

| ವಿಷಯದ ಕೋಡ್ | ವಿಷಯ | ಪ್ರಶ್ನೆಪತ್ರಿಕೆಯ ಮಾಧ್ಯಮ |
|---|---|---|
| 01 | ವಾಣಿಜ್ಯಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 02 | ಕನ್ನಡ | ಕನ್ನಡಭಾಷೆ |
| 03 | ಅರ್ಥಶಾಸ್ತ್ರ (I) | ಕನ್ನಡ ಮತ್ತು ಆಂಗ್ಲಭಾಷೆ |
| 04 | ಇಂಗ್ಲೀಷ್ | ಆಂಗ್ಲಭಾಷೆ |
| 05 | ರಾಜ್ಯಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 06 | ಇತಿಹಾಸ | ಕನ್ನಡ ಮತ್ತು ಆಂಗ್ಲಭಾಷೆ |
| 07 | ಸಮಾಜಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 08 | ಭೂಗೋಳಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 09 | ಹಿಂದಿ | ಹಿಂದಿಭಾಷೆ |
| 10 | ನಿರ್ವಹಣೆ (ಮ್ಯಾನೇಜ್‌ಮೆಂಟ್) (II) | ಕನ್ನಡ ಮತ್ತು ಆಂಗ್ಲಭಾಷೆ |
| 11 | ಪ್ರವಾಸೋದ್ಯಮ ಆಡಳಿತ ಮತ್ತು ನಿರ್ವಹಣೆ | ಕನ್ನಡ ಮತ್ತು ಆಂಗ್ಲಭಾಷೆ |
| 12 | ಶಿಕ್ಷಣ | ಕನ್ನಡ ಮತ್ತು ಆಂಗ್ಲಭಾಷೆ |
| 13 | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ | ಆಂಗ್ಲಭಾಷೆ |
| 14 | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | ಕನ್ನಡ ಮತ್ತು ಆಂಗ್ಲಭಾಷೆ |
| 15 | ಮನೋವಿಜ್ಞಾನ | ಕನ್ನಡ ಮತ್ತು ಆಂಗ್ಲಭಾಷೆ |
| 16 | ಸಮಾಜ ಕಾರ್ಯ | ಕನ್ನಡ ಮತ್ತು ಆಂಗ್ಲಭಾಷೆ |
| 17 | ಅಪರಾಧ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 18 | ಕಾನೂನು | ಕನ್ನಡ ಮತ್ತು ಆಂಗ್ಲಭಾಷೆ |
| 19 | ಸಂಸ್ಕೃತ | ಸಂಸ್ಕೃತಭಾಷೆ |
| 20 | ದೈಹಿಕ ಶಿಕ್ಷಣ | ಕನ್ನಡ ಮತ್ತು ಆಂಗ್ಲಭಾಷೆ |
| 21 | ಜನಪದ ಸಾಹಿತ್ಯ (III) | ಕನ್ನಡ ಮತ್ತು ಆಂಗ್ಲಭಾಷೆ |
| 22 | ಉರ್ದು | ಉರ್ದುಭಾಷೆ |
| 23 | ಸಾರ್ವಜನಿಕ ಆಡಳಿತ | ಕನ್ನಡ ಮತ್ತು ಆಂಗ್ಲಭಾಷೆ |
| 24 | ಗಣಕ ವಿಜ್ಞಾನ ಮತ್ತು ಅನ್ವಯ | ಆಂಗ್ಲಭಾಷೆ |
| 25 | ಭೌತಿಕ ವಿಜ್ಞಾನಗಳು (IV) | ಆಂಗ್ಲಭಾಷೆ |
| 26 | ಗಣಿತ ವಿಜ್ಞಾನಗಳು (V) | ಆಂಗ್ಲಭಾಷೆ |
| 27 | ರಸಾಯನಿಕ ವಿಜ್ಞಾನಗಳು (VI) | ಆಂಗ್ಲಭಾಷೆ |
| 28 | ಜೀವ ವಿಜ್ಞಾನಗಳು (VII) | ಆಂಗ್ಲಭಾಷೆ |
| 29 | ಪರಿಸರ ವಿಜ್ಞಾನ (VIII) | ಆಂಗ್ಲಭಾಷೆ |
| 30 | ಗೃಹ ವಿಜ್ಞಾನ | ಆಂಗ್ಲಭಾಷೆ |
| 31 | ವಿದ್ಯುನ್ಮಾನ ವಿಜ್ಞಾನ | ಆಂಗ್ಲಭಾಷೆ |
| 32 | ಭೂ ವಿಜ್ಞಾನ | ಆಂಗ್ಲಭಾಷೆ |
| 33 | ಪುರಾತತ್ವ ಶಾಸ್ತ್ರ (ಆರ್ಕಿಯಾಲಜಿ) (IX) | ಕನ್ನಡ ಮತ್ತು ಆಂಗ್ಲಭಾಷೆ |
| 34 | ಮಾನವ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 35 | ಮರಾಠಿ | ಮರಾಠಿ |
| 36 | ತತ್ವಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |

| | | |
|---|---|---|
| 37 | ಮಹಿಳಾ ಅಧ್ಯಯನ (X) | ಕನ್ನಡ ಮತ್ತು ಆಂಗ್ಲಭಾಷೆ |
| 38 | ಭಾಷಾ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 39 | ಪ್ರದರ್ಶಕ ಕಲೆಗಳು | ಕನ್ನಡ ಮತ್ತು ಆಂಗ್ಲಭಾಷೆ |
| 40 | ಸಂಗೀತ | ಕನ್ನಡ ಮತ್ತು ಆಂಗ್ಲಭಾಷೆ |
| 41 | ದೃಶ್ಯ ಕಲೆಗಳು | ಕನ್ನಡ ಮತ್ತು ಆಂಗ್ಲಭಾಷೆ |

**ಸೂಚನೆ:** I. ಅರ್ಥಶಾಸ್ತ್ರ / ಕೋ–ಆಪರೇಷನ್ ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು **'ಅರ್ಥಶಾಸ್ತ್ರ'** ದಲ್ಲಿ ಕೆಎಸ್ಇಟಿ **(KSET)** ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

II. ನಿರ್ವಹಣೆ (ಮ್ಯಾನೇಜ್‌ಮೆಂಟ್) ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಅಥವಾ ಪಿ.ಜಿ. ಡಿಪ್ಲೋಮೊ ಇನ್ ಮ್ಯಾನೇಜ್‌ಮೆಂಟ್ ಹೊಂದಿರುವ ಅಭ್ಯರ್ಥಿಗಳು **'ನಿರ್ವಹಣೆ' (ಮ್ಯಾನೇಜ್‌ಮೆಂಟ್)** ನಲ್ಲಿ ಕೆಎಸ್ಇಟಿ **(KSET)** ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

III. ಜನಪದ ಸಾಹಿತ್ಯ, ಕನ್ನಡ, ಜಾನಪದ, ಕನ್ನಡ ಜಾನಪದ, ಜಾನಪದ ಸಾಹಿತ್ಯ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು **'ಜನಪದ ಸಾಹಿತ್ಯ'** ದಲ್ಲಿ ಕೆಎಸ್ಇಟಿ **(KSET)** ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

IV. ಭೌತಶಾಸ್ತ್ರ/ಎಲೆಕ್ಟ್ರಾನಿಕ್ಸ್/ ಪರಮಾಣು ಮತ್ತು ಅಣು ಭೌತವಿಜ್ಞಾನ/ ಕ್ಲಾಸಿಕಲ್ ಡೈನಾಮಿಕ್ಸ್/ಕಂಡೆನ್ಸಡ್ ಮ್ಯಾಟರ್ ಫಿಜಿಕ್ಸ್/ಎಲೆಕ್ಟ್ರೋಮ್ಯಾಗ್ನೆಟಿಕ್/ ಎಕ್ಸ್‌ಪಿರಿಮೆಂಟಲ್ ಡಿಸೈನ್/ ನ್ಯೂಕ್ಲಿಯರ್, ಸ್ಪೇಸ್ ಅಂಡ್ ಪ್ರಾಕ್ಟೀಕಲ್ ಫಿಜಿಕ್ಸ್/ ಕ್ವಾಂಟಮ್ ಫಿಜಿಕ್ಸ್/ ಥರ್ಮೋಡೈನಾಮಿಕ್ಸ್, ಅಸ್ಟ್ರೋನಾಮಿ, ಆಸ್ಟ್ರೋಫಿಜಿಕ್ಸ್ / ಮೆಟಿರೀಯಲ್ ಸೈನ್ಸ್ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್ಇಟಿ **(KSET)** ಪರೀಕ್ಷೆಯನ್ನು **'ಭೌತಿಕವಿಜ್ಞಾನ'** ದಲ್ಲಿ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

V. ಯಾವ ಅಭ್ಯರ್ಥಿಗಳು ಶುದ್ಧಗಣಿತವಿಜ್ಞಾನ/ಸಂಖ್ಯಾಶಾಸ್ತ್ರ/ಅನ್ವಯಿಕ ಗಣಿತ ವಿಜ್ಞಾನ/ಗಣಿತ ಮತ್ತು ಗಣಕ ವಿಜ್ಞಾನ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್ಇಟಿ **(KSET)** ಪರೀಕ್ಷೆಯನ್ನು **'ಗಣಿತ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

VI. ರಾಸಾಯನಿಕವಿಜ್ಞಾನಗಳು/ ವಿಶ್ಲೇಷಣಾತ್ಮಕರಾಸಾಯನ ವಿಜ್ಞಾನ/ಇನಾರ್ಗ್ಯಾನಿಕ್ (ನಿರವಯವ)/ ರಾಸಾಯನ ವಿಜ್ಞಾನ/ ಆರ್ಗ್ಯಾನಿಕ್ (ಸಾವಯವ) ರಾಸಾಯನ ವಿಜ್ಞಾನ/

ಭೌತ ರಾಸಾಯನ ವಿಜ್ಞಾನ/ ಮೆಡಿಸಿನಲ್ ಕೆಮಿಸ್ಟ್ರಿ/ ಅನ್ವಯಿಕ ರಾಸಾಯನ ಶಾಸ್ತ್ರ/ ನ್ಯೂಕ್ಲಿಯರ್ ಕೆಮಿಸ್ಟ್ರಿ/ ಪರಿಸರ ರಸಾಯನ ಶಾಸ್ತ್ರ/ ಮೆರೈನ್ ಕೆಮಿಸ್ಟ್ರಿ/ ಫರ್ಮಾಸಿಟಿಕಲ್ ಕೆಮಿಸ್ಟ್ರಿ/ ಬಯೋ–ಆರ್ಗಾನಿಕ್ ಕೆಮಿಸ್ಟ್ರಿ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್ಇಟಿ (**KSET)** ಪರೀಕ್ಷೆಯನ್ನು **'ರಾಸಾಯನಿಕ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

VII. ಜೀವ ರಾಸಾಯನ ವಿಜ್ಞಾನ/ ಜೀವ ವಿಜ್ಞಾನ/ಜೈವಿಕ ತಂತ್ರಜ್ಞಾನ/ಜೀವವೈವಿಧ್ಯತೆ ಮತ್ತು Taxonomy/ಸಸ್ಯವಿಜ್ಞಾನ/Genetic/ಮೈಕ್ರೊಬಯಾಲಜಿ/Physiology/ಪ್ರಾಣಿವಿಜ್ಞಾನ/ ಫಿಶರಿಸೈನ್ಸ್/ಅನಿಮಲ್ ಬಯೋಲಾಜಿ/ಮೆರೈನ್ ಬಯೋಲಾಜಿ/ಅಪ್ಲೈಡ್ ಜೆನೆಟಿಕ್ಸ್ / ಸಿರಿಕಲ್ಚರ್ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್ಇಟಿ (**KSET)** ಪರೀಕ್ಷೆಯನ್ನು **'ಜೈವಿಕ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

VIII. ಭೂ ವಿಜ್ಞಾನ/ಅನ್ವಯಿಕ ಭೂವಿಜ್ಞಾನ/ಭೂ ಭೌತವಿಜ್ಞಾನ (ಜಿಯೋ ಫಿಸಿಕ್ಸ್)/ ಹವಾಮಾನ ವಿಜ್ಞಾನ/ಸಾಗರ ವಿಜ್ಞಾನ/ಫಿಜಿಕಲ್ ಜಿಯೋಗ್ರಾಫಿ/ಎಂ.ಎಸ್.ಜಿಯೋಲಾಜಿ/ ಭೂವಿಜ್ಞಾನ ಸಂಪನ್ಮೂಲ ಮತ್ತು ಸಾಗರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ/ ಪೆಟ್ರೋಲಿಯಂ ಜಿಯೋಲಾಜಿ/ಜಿಯೋಇನ್‌ಫಾರ್ಮ್ಯಾಟಿಕ್ಸ/ ಅಪ್ಲೈಡ್ ಜಿಯೋಕೆಮಿಸ್ಟ್ರಿ/ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್ಇಟಿ (**KSET)** ಪರೀಕ್ಷೆಯನ್ನು **'ಭೂ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

IX. ಪುರಾತತ್ವ ಶಾಸ್ತ್ರ (ಆರ್ಕಿಯಾಲಜಿ) ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ತಿಗಳು **'ಪುರಾತತ್ವ ಶಾಸ್ತ್ರ'** (ಆರ್ಕಿಯಾಲಜಿ)ದಲ್ಲಿ ಕೆಎಸ್ಇಟಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

X. ಮಹಿಳಾ ಅಧ್ಯಯನ / ಗ್ರಾಮೀಣ ಅಭಿವೃದ್ಧಿ, ಮಾನವಿಕ/ಸಮಾಜ ವಿಜ್ಞಾನ ಹಾಗೂ ಭಾಷಾ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು **'ಮಹಿಳಾ ಅಧ್ಯಯನ'** ದಲ್ಲಿ ಕೆಎಸ್ಇಟಿ (**KSET)** ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

**ಸೂಚನೆ :** **ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಗಳು, ಒಮ್ಮೆಗೆ ಯಾವುದಾದರು ಒಂದು ವಿಷಯದಲ್ಲಿ ಮಾತ್ರ ಕೆಎಸ್ಇಟಿ (KSET) ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ಒಮ್ಮೆ ಪರೀಕ್ಷಾ ವಿಷಯವನ್ನು ಆಯ್ಕೆ ಮಾಡಿದ ನಂತರ ಯಾವುದೇ ಕಾರಣಕ್ಕೂ ವಿಷಯಗಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**

**ಪರೀಕ್ಷಾ ಕೇಂದ್ರಗಳು.**

ಕೆಎಸ್‌ಇಟಿ (**KSET**) ಪರೀಕ್ಷೆಯನ್ನು ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡ 11 ನೋಡಲ್ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುತ್ತದೆ, ನೋಡಲ್ ಕೇಂದ್ರಗಳ ಕೋಡ್‌ಗಳನ್ನು ಕೇಂದ್ರದ ಹೆಸರಿನೊಂದಿಗೆ ಕೊಡಲಾಗಿದೆ. ಕೆಎಸ್‌ಇಟಿ (**KSET**) ಪರೀಕ್ಷೆಯನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷಾ ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

| ಕ್ರ. ಸಂ | ಪರೀಕ್ಷಾ ಕೇಂದ್ರದ ಹೆಸರು | ಕೋಡ್ |
|---|---|---|
| 1 | ಬೆಂಗಳೂರು | 10 |
| 2 | ಬೆಳಗಾವಿ | 11 |
| 3 | ಬಳ್ಳಾರಿ | 12 |
| 4 | ವಿಜಯಪುರ | 13 |
| 5 | ದಾವಣಗೆರೆ | 14 |
| 6 | ಧಾರವಾಡ | 15 |
| 7 | ಕಲ್ಬುರ್ಗಿ | 16 |
| 8 | ಮಂಗಳೂರು | 17 |
| 9 | ಮೈಸೂರು | 18 |
| 10 | ಶಿವಮೊಗ್ಗ | 19 |
| 11 | ತುಮಕೂರು | 20 |

**ಟಿಪ್ಪಣಿ: ವಿದ್ಯಾರ್ಥಿಯು ಒಮ್ಮೆ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿದ ನಂತರ, ಪರೀಕ್ಷಾ ಕೇಂದ್ರದ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**

## ಕೆಎಸ್ಇಟಿ (KSET) – 2021ರ ಪರೀಕ್ಷೆಗೆ ಸಂಪರ್ಕಿಸಬೇಕಾದ ವ್ಯಕ್ತಿಗಳ ಪಟ್ಟಿ

(ನೋಡಲ್ ಅಧಿಕಾರಿಗಳ ಪಟ್ಟಿಯಲ್ಲಿ ಆಯಾ ವಿಶ್ವವಿದ್ಯಾನಿಲಗಳ ನೇಮಕಾತಿಗೆ ಅನುಗುಣವಾಗಿ ಬದಲಾವಣೆಯಾಗಬಹುದು)

| | |
|---|---|
| **ಪ್ರೊ. ಜಿ. ಹೇಮಂತ್ ಕುಮಾರ್**<br>**ಕುಲಪತಿಗಳು ಮತ್ತು ಅಧ್ಯಕ್ಷರು, ಕೆ.ಎಸ್.ಇ.ಟಿ** | **ಪ್ರೊ. ಎಚ್. ರಾಜಶೇಖರ್**<br>**ಸಂಯೋಜಕರು, ಕೆ.ಎಸ್.ಇ.ಟಿ & ಸದಸ್ಯ ಕಾರ್ಯದರ್ಶಿ**<br>**ದೂರವಾಣಿ :** 0821 – 2419202, 426 |
| **ಕೆ.ಎಸ್.ಇ.ಟಿ (KSET) ಕೇಂದ್ರ**<br>**ಮೌಲ್ಯಭವನ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–570 006.** | |
| **ಎಲ್ಲಾ ಕೇಂದ್ರಗಳ ನೋಡಲ್ ಅಧಿಕಾರಿಗಳು** | |
| **1. ಬೆಂಗಳೂರು ಕೋಡ್: 10**<br>ಪ್ರೊ. ಬಿ. ಈರಯ್ಯ<br>ಭೌತಶಾಸ್ತ್ರ ವಿಭಾಗ,<br>ಬೆಂಗಳೂರು ವಿಶ್ವವಿದ್ಯಾನಿಲಯ,<br>ಜ್ಞಾನ ಭಾರತಿ ಕ್ಯಾಂಪಸ್,ಬೆಂಗಳೂರು 560 056<br>ಮೊ: 7795186012,<br>email: beraiah@bub.ernet.in | **2. ಬೆಳಗಾವಿ ಕೋಡ್: 11**<br>ಪ್ರೊ.ಸಿ.ಎಮ್. ತ್ಯಾಗರಾಜ<br>ನಿರ್ವಹಣೆ ಅಧ್ಯಯನ ವಿಭಾಗ,<br>ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, NH–04,<br>ಭೂತರಾಯನಹಟ್ಟಿ, ಬೆಳಗಾವಿ– 591 196,<br>ಮೋ: 9448697046<br>email: thyagaraj1121@gmail.com |
| **3. ಬಳ್ಳಾರಿ ಕೋಡ್: 12**<br>ಪ್ರೊ.ವಿ.ಲೋಕೇಶ್<br>ಗಣಿತಶಾಸ್ತ್ರ ವಿಭಾಗ,<br>ವಿಜಯನಗರ ಶ್ರೀಕೃಷ್ಣದೇವರಾಯ<br>ವಿಶ್ವವಿದ್ಯಾನಿಲಯ, ಜ್ಞಾನ ಸಾಗರ ಕ್ಯಾಂಪಸ್,<br>ವಿನಾಯಕ ನಗರ, ಬಳ್ಳಾರಿ–583 105<br>ದೂರವಾಣಿ: 08392–242702,<br>ಮೊ.ನಂ: 88925 31820<br>email: lokeshv@vskub.ac.in | **4. ವಿಜಯಪುರ ಕೋಡ್: 13**<br>ಪ್ರೊ.ಡಿ.ಎಂ. ಮದರಿ<br>ಅರ್ಥಶಾಸ್ತ್ರ ಅಧ್ಯಯನ ವಿಭಾಗ,<br>ಜ್ಞಾನಶಕ್ತಿ ಕ್ಯಾಂಪಸ್,<br>ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,<br>ತೊರವಿ, ವಿಜಯಪುರ –586 109<br>ದೂರವಾಣಿ:<br>ಮೊ.ನಂ: 6364112965<br>email: ksetnodalofficer@kswu.ac.in |
| **5. ದಾವಣಗೆರೆ ಕೋಡ್: 14**<br>ಪ್ರೊ.ಜೆ.ಕೆ.ರಾಜು<br>ನಿರ್ವಹಣೆ ಅಧ್ಯಯನ ವಿಭಾಗ,<br>ದಾವಣಗೆರೆ ವಿಶ್ವವಿದ್ಯಾನಿಲಯ,<br>ತೋಳಹುಣಸೆ,<br>ಶಿವಗಂಗೋತ್ರಿ, ದಾವಣಗೆರೆ–577 002,<br>ದೂರವಾಣಿ: 08192 –<br>ಮೊ.ನಂ: 9448728962<br>email: drjavaliraju@hotmail.com | **6. ಧಾರವಾಡ ಕೋಡ್: 15**<br>ಪ್ರೊ.ಆರ್.ಆರ್.ನಾಯಕ್<br>ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ<br>ಕರ್ನಾಟಕ ವಿಶ್ವವಿದ್ಯಾನಿಲಯ,<br>ಪಾವಟೆ ನಗರ, ಧಾರವಾಡ– 580 003.<br>ದೂರವಾಣಿ: 0836 - 2215216<br>ಮೊ. ನಂ: 80885 01926,<br>Email: rrnaik@gmail.com |

| | |
|---|---|
| 7. ಕಲ್ಬುರ್ಗಿ **ಕೋಡ್: 16**<br>ಪ್ರೊ.ಚಂದ್ರಕಾಂತ ಕೆಳಮನಿ<br>ಜೈವಿಕ ತಂತ್ರಜ್ಞಾನ ವಿಭಾಗ,<br>ಗುಲ್ಬರ್ಗಾ ವಿಶ್ವವಿದ್ಯಾನಿಲಯ,<br>ಕಲ್ಬುರ್ಗಿ–585 106.<br>ಮೊ.ನಂ: 7676753056<br>email: ckelmani@gmail.com | **8. ಮಂಗಳೂರು ಕೋಡ್: 17**<br>**ಪ್ರೊ. ಭೋಜ ಪೂಜಾರಿ**<br>ರಸಾಯನಶಾಸ್ತ್ರ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ, ಮಂಗಳೂರು – 574 199.<br>ದೂರವಾಣಿ : 0824–2287262(O), 424(Fax)<br>ಮೊ.ನಂ.: 9686940403<br>email: mangalorekset16@gmail.com |
| **9. ಮೈಸೂರು ಕೋಡ್: 18**<br>ಸಂಯೋಜಕರು<br>ಕೆಸೆಟ್ ಕೇಂದ್ರ, ಮೌಲ್ಯ ಭವನ.<br>ಮೈಸೂರು ವಿಶ್ವವಿದ್ಯಾನಿಲಯ,<br>ಮಾನಸಗಂಗೋತ್ರಿ, ಮೈಸೂರು–570 006,<br>ದೂರವಾಣಿ: 0821 – 2419202, 426<br>email: hrkset2013@gmail.com | **10. ಶಿವಮೊಗ್ಗ ಕೋಡ್: 19**<br>ಪ್ರೊ.ಎ.ಎನ್.ರಾಜೇಶ್ವರ ಆಚುರ್<br>ಜೀವ–ರಸಾಯನಶಾಸ್ತ್ರ ವಿಭಾಗ,<br>ಜ್ಞಾನ ಸಹ್ಯಾದ್ರಿ, ಕುವೆಂಪು ವಿಶ್ವವಿದ್ಯಾನಿಲಯ,<br>ಶಂಕರಘಟ್ಟ, ಶಿವಮೊಗ್ಗ– 577 451,<br>ದೂರವಾಣಿ: 08282–265308<br>ಮೊ.ನಂ: 9972345080<br>email : rajachur@gmail.com |
| **11. ತುಮಕೂರು ಕೋಡ್: 20**<br>ಪ್ರೊ.ಕೆ.ಎಸ್.ಗಿರೀಶ<br>ಜೀವ–ರಸಾಯನಶಾಸ್ತ್ರ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ<br>ತುಮಕೂರು–572 103<br>ದೂರವಾಣಿ: 96067 43224<br>email: ksgbaboo@gmail.com | |

**ಅರ್ಜಿಯನ್ನು ಸಲ್ಲಿಸುವ ವಿಧಾನ:**

**ಕೆಎಸ್ಇಟಿ 2021ಕ್ಕೆ ಪ್ರವೇಶ ಬಯಸುವ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು** (http://kset.uni-mysore.ac.in).

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಯಾವುದೇ ರೀತಿಯ ಅನಾನುಕೂಲತೆ ಅಥವಾ ಕೊನೆಯ ನಿಮಿಷದ ವಿಪರೀತ ಅಥವಾ ಅನಿರೀಕ್ಷಿತ ತೊಂದರೆಗಳನ್ನು ತಪ್ಪಿಸಲು, ಅಭ್ಯರ್ಥಿಗಳು ಕೊನೆಯ ದಿನಾಂಕಕ್ಕಾಗಿ ಕಾಯದೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ. ಕೊನೆಯ ದಿನದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವಾಗ ನೆಟ್‌ವರ್ಕ್ ಸಮಸ್ಯೆಗಳಿಗೆ ಅಥವಾ ಯಾವುದೇ ಸಮಸ್ಯೆಗಳಿಗೆ ಕೆಎಸ್ಇಟಿ ಜವಾಬ್ದಾರಿಯಾಗಿರುವುದಿಲ್ಲ.

ಅಗತ್ಯವಿರುವ ಇ–ಮೇಲ್ ಐಡಿ ಮತ್ತು ಪಾಸ್‌ವರ್ಡ್ ನೀಡಿ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬೇಕು (ನೋಂದಣಿಗೆ ಸೈನ್ ಅಪ್ ಮಾಡಿ). ಅಭ್ಯರ್ಥಿಗಳು ನಂತರ ತಮ್ಮ

ವೈಯಕ್ತಿಕ, ಶೈಕ್ಷಣಿಕ ಮತ್ತು ಕೆಎಸ್‌ಇಟಿ ಪರೀಕ್ಷೆಯ ವಿವರಗಳನ್ನು ನೀಡಲು ಮುಂದುವರಿಯುತ್ತಾರೆ. ಅವರ ಶೈಕ್ಷಣಿಕ ಅರ್ಹತೆಯನ್ನು ಪ್ರಸ್ತಾಪಿಸಿ ಅವರು ತಮ್ಮ ಪಿಜಿ ಕೋರ್ಸ್ ಅನ್ನು ಪಾಸ್ ಅಥವಾ appearing ನಮೂದಿಸಬೇಕು.

(ಗಮನಿಸಿ: ಕೆಎಸ್‌ಇಟಿ (**KSET**) 2021ರ **ಅಂತಿಮ ಫಲಿತಾಂಶ ಪ್ರಕಟಣೆಯಾಗುವವರೆಗೂ** ಅಭ್ಯರ್ಥಿಗಳು ತಮ್ಮ ಇ–ಮೇಲ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.)

**ಗಮನಿಸಿ: ಎಲ್ಲಾ ಸ್ಕ್ಯಾನ್ ಮಾಡಿದ ಪ್ರತಿಗಳು ಜೆಪಿಇಜಿ ಸ್ವರೂಪದಲ್ಲಿ ಮಾತ್ರ ಇರಬೇಕು. ಆನ್‌ಲೈನ್ ಅಪ್ಲಿಕೇಶನ್ ವ್ಯವಸ್ಥೆಯು ನಿರ್ದಿಷ್ಟಪಡಿಸಿದ ಗಾತ್ರಗಳಿಗಿಂತ ಚಿಕ್ಕದಾದ / ದೊಡ್ಡದಾದ ಫೈಲ್‌ಗಳನ್ನು ಅಪ್‌ಲೋಡ್ ಮಾಡಲು ಅನುಮತಿಸುವುದಿಲ್ಲ.**

a. ಅಭ್ಯರ್ಥಿಯ ಭಾವಚಿತ್ರ : ಅರ್ಜಿ ಸಲ್ಲಿಸಲು ಮುಂದುವರಿಯುವ ಮೊದಲು ಅಭ್ಯರ್ಥಿಗಳು ಸ್ಕ್ಯಾನ್ ಮಾಡಿದ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಜೆಪಿಇಜಿ ಸ್ವರೂಪದಲ್ಲಿ ಹೊಂದಿರಬೇಕು. (10 kb to 100 kb). ಭಾವಚಿತ್ರವನ್ನು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಅಪ್‌ಲೋಡ್ ಮಾಡಲು ಮತ್ತು ಪರೀಕ್ಷಾ ಕೇಂದ್ರದಲ್ಲಿ ಹಾಜರಾತಿ ಪ್ರತಿಯಲ್ಲಿ ಅಂಟಿಸಲು ಬಳಸಲಾಗುತ್ತದೆ.

b. ಅಭ್ಯರ್ಥಿಯ ಹೆಸರು / ತಾಯಿಯ ಹೆಸರು / ತಂದೆಯ ಹೆಸರು : ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನೀಡಲಾಗಿರುವಂತೆ ಅಭ್ಯರ್ಥಿಯ ಹೆಸರು / ತಾಯಿಯ ಹೆಸರು / ತಂದೆಯ ಹೆಸರು ಅಥವಾ ದೊಡ್ಡ ಅಕ್ಷರಗಳಲ್ಲಿ ಸಮಾನ ಮಂಡಳಿ / ವಿಶ್ವವಿದ್ಯಾಲಯದ ಪ್ರಮಾಣಪತ್ರದಲ್ಲಿ ಇರುವಂತೆ ಅರ್ಜಿಯಲ್ಲಿ ಫಿಲ್ ಮಾಡಬೇಕು.

**c.** ಹುಟ್ಟಿದ ದಿನಾಂಕ : **dd/mm/yyyy**
ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಅಥವಾ ಸಮಾನ ಮಂಡಳಿ / ವಿಶ್ವವಿದ್ಯಾಲಯದ ಪ್ರಮಾಣಪತ್ರದಲ್ಲಿ ಇರುವಂತೆ ಅರ್ಜಿಯಲ್ಲಿ ಫಿಲ್ ಮಾಡಬೇಕು.

d. **ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸ** : ಅಭ್ಯರ್ಥಿಗಳು ಸ್ವಂತ **ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸ ಹೊಂದಿರಬೇಕು.**
**ಗಮನಿಸಿ : ಒಂದು ಅರ್ಜಿಗೆ ಕೇವಲ ಒಂದು ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸ ಮಾತ್ರ ಮಾನ್ಯವಾಗಿರುತ್ತದೆ.**

e. ಅಭ್ಯರ್ಥಿಗಳು ಕೆಎಸ್‌ಇಟಿ (**KSET**) ಪರೀಕ್ಷೆಗೆ ಸಂಬಂಧಪಟ್ಟ ಶುಲ್ಕ ಮತ್ತು ಬ್ಯಾಂಕ್ ಚಾರ್ಜಸ್‌ನ್ನು ಚಲನ್‌ನಲ್ಲಿ ನಮೂದಿಸಿರುವಂತೆ **ಕೆಎಸ್‌ಇಟಿ ವೆಬ್‌ಸೈಟ್ ಅಥವಾ** ಯಾವುದಾದರು ಸಮೀಪದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಪಾವತಿಸಬಹುದು.

f. ಶುಲ್ಕವನ್ನು ಪಾವತಿಸಿದ ಎರಡು ದಿನಗಳ [Two Working Days] ನಂತರ ಅಭ್ಯರ್ಥಿಗಳು ನೊಂದಾಯಿತ ಇಮೇಲ್ ಐಡಿ ಮತ್ತು ಪಾಸ್‌ವರ್ಡ್‌ನೊಂದಿಗೆ ಲಾಗ್‌ಇನ್ (Login) ಆಗಿ ಆನ್‌ಲೈನ್ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು A4 ಅಳತೆಯ ಕಾಗದದಲ್ಲಿ ಕೆಳಕಂಡ ಮೂರು ಪುಟಗಳನ್ನು ಮುದ್ರಿಸಿಕೊಳ್ಳಬೇಕು.

1. ಅರ್ಜಿಯ ಪ್ರತಿ
2. ಹಾಜರಾತಿ ಪತ್ರ } ಆಯ್ಕೆ ಮಾಡಿದ ನೋಡೆಲ್ ಕೇಂದ್ರಕ್ಕೆ ಸಲ್ಲಿಸುವುದು.
3. ಪ್ರವೇಶ ಪತ್ರ : ಅಭ್ಯರ್ಥಿಯು ತಮ್ಮಲ್ಲಿಯೇ ಇಟ್ಟುಕೊಳ್ಳುವುದು.

- ಅಭ್ಯರ್ಥಿಗಳು ಅರ್ಜಿ (Application Form) ಹಾಗೂ ಹಾಜರಾತಿ ಪ್ರತಿಯಲ್ಲಿ (Attendance Slip) ಕಾಯ್ದಿರಿಸಿದ ಸೂಕ್ತ ಸ್ಥಳದಲ್ಲಿ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಚಿತ್ರದ ಇಕ್ಕೆಲಗಳಲ್ಲೂ ಬರುವಂತೆ ಸಹಿ ಮಾಡಬೇಕು. ಭಾವಚಿತ್ರಕ್ಕೆ ಗೆಜೆಟೆಡ್ ಅಧಿಕಾರಿಯಿಂದ ಸಹಿ ಮತ್ತು ಅಧಿಕೃತ ಮೊಹರಿನೊಂದಿಗೆ ಧೃಡೀಕೃತಗೊಳಿಸಬೇಕು.

**g.** ಅಭ್ಯರ್ಥಿಗಳು ಕಡ್ಡಾಯವಾಗಿ ಅರ್ಜಿಯ ಜೊತೆಗೆ ಹಾಜರಾತಿ ಪತ್ರವನ್ನು ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ನೊಡೆಲ್ ಕೇಂದ್ರಕ್ಕೆ ಸಲ್ಲಿಸಬೇಕು. ಕೊನೆ ದಿನಗಳ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**h.** ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬೇಕು **ನೋಡೆಲ್ ಕೇಂದ್ರವು ಯಾವ ಅಭ್ಯರ್ಥಿಗಳಿಗೂ ಪ್ರತ್ಯೇಕವಾಗಿ ಪ್ರವೇಶ ಪತ್ರವನ್ನು ನೀಡುವುದಿಲ್ಲ. ಅಭ್ಯರ್ಥಿಗಳು ಅಧಿಕೃತ ಭಾವಚಿತ್ರವುಳ್ಳ ಗುರುತಿನ ಚೀಟಿ [Identity Card] ಯನ್ನು ಮರೆಯದೇ ಪರೀಕಾ ಕೇಂದ್ರಕ್ಕೆ ತರುವುದು.**

**ಸಾಮಾನ್ಯ ಸೂಚನೆಗಳು:**

1. ಅಭ್ಯರ್ಥಿಗಳು ಅರ್ಹತಾ ನಿಬಂಧನೆಗಳನ್ನು ಗಮನವಿಟ್ಟು ಓದಿ, ಅಭ್ಯರ್ಥಿಗಳು ಕೆಎಸ್ಇಟಿ (**KSET**) ಪರೀಕ್ಷೆಗೆ ಅರ್ಹತೆಯನ್ನು ಪಡೆದಿದ್ದಾರೋ ಇಲ್ಲವೋ ಎಂಬುದನ್ನು ಖಚಿತ ಪಡಿಸಿಕೊಂಡು, **Online** ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಕೆಎಸ್ಇಟಿ (**KSET**) ಕೇಂದ್ರವು ಪರೀಕ್ಷಾ ಕೇಂದ್ರವನ್ನು ಅಥವಾ ಪರೀಕ್ಷಾ ದಿನಾಂಕವನ್ನು ಯಾವುದೇ ಕಾರಣ ನೀಡದೆ ಬದಲಾಯಿಸಬಹುದು.
3. ಪರೀಕ್ಷೆಯನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಪ್ರಯಾಣಭತ್ಯೆ/ತುಟ್ಟಿ ಭತ್ಯೆ (TD/DA) ಯನ್ನು ನೀಡಲಾಗುವುದಿಲ್ಲ.
4. ಯಾವುದೇ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಆಯ್ಕೆಮಾಡಿಕೊಂಡ ಅಯಾ ಪರೀಕ್ಷಾ ಕೇಂದ್ರದ ನೋಡೆಲ್ ಅಧಿಕಾರಿಯವರನ್ನು (ಹೆಸರು, ವಿಳಾಸ ಈ ವೆಬ್‌ಸೈಟ್ ನಲ್ಲಿ **http://kset.uni-mysore.ac.in** ಲಭ್ಯ) ಸಂಪರ್ಕಿಸಬಹುದು.
5. ಬೇರೆ ಯಾವುದೇ ನಮೂನೆಯ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
6. ಅಭ್ಯರ್ಥಿಗಳು ಅರ್ಜಿಯಲ್ಲಿ ನಿಗದಿತ ಜಾಗದಲ್ಲಿ ಸಹಿ ಹಾಕುವುದನ್ನು ಮರೆಯಬಾರದು. ಅರ್ಜಿ, ಪ್ರವೇಶ ಪತ್ರ ಮತ್ತು ಹಾಜರಾತಿ ಪತ್ರದಲ್ಲಿ ಭಾವಚಿತ್ರ ಅಂಟಿಸಲು ಕೊಟ್ಟಿರುವ ಸೂಕ್ತ ಜಾಗದಲ್ಲಿಯೇ ಇತ್ತೀಚಿನ ಭಾವಚಿತ್ರವನ್ನು ಅಂಟಿಸಬೇಕು ಹಾಗೂ ಎಲ್ಲಾ ಭಾವಚಿತ್ರಗಳು ಏಕರೂಪದ್ದಾಗಿರಬೇಕು.
7. ಅಭ್ಯರ್ಥಿಗಳು ತಮ್ಮ ಹಿತದೃಷ್ಟಿಯಿಂದ ಒಂದು ಪ್ರತಿ ಅರ್ಜಿ, ಹಾಜರಾತಿ ಪತ್ರ, ಪ್ರವೇಶ ಪತ್ರ ಮತ್ತು ರಶೀದಿ/ ಇ–ಚಲನ್ ಪ್ರತಿಗಳನ್ನು ತಮ್ಮೊಂದಿಗೆ ಇರಿಸಿಕೊಳ್ಳಲು ಸೂಚಿಸಲಾಗಿದೆ. ಇದರಿಂದ

ಅಭ್ಯರ್ಥಿಗಳಿಗೆ ಕೆಎಸ್‌ಇಟಿ **(KSET)** ಪರೀಕ್ಷೆಯ ಬಗ್ಗೆ ಮಾಹಿತಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

8. ಅರ್ಜಿಯನ್ನು **Online** ಮೂಲಕ ಸಲ್ಲಿಸುವುದು ಕಡ್ಡಾಯ.
9. ಭರ್ತಿ ಮಾಡಿದ ಅರ್ಜಿಯಲ್ಲಿರುವ ಘೋಷಣೆಗೆ ಅಭ್ಯರ್ಥಿಗಳು ಮರೆಯದೆ ಸಹಿ ಮಾಡಿರಬೇಕು. ಘೋಷಣೆಗೆ ಸಹಿ ಮಾಡದ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.
10. ಈ ಕೆಳಕಂಡ ಮಾಹಿತಿ / ಧೃಢೀಕೃತ ದಾಖಲೆಗಳನ್ನು ಪೂರೈಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
    a. ಸರಿಯಾದ ಪರೀಕ್ಷಾ ಕೇಂದ್ರದ ಆಯ್ಕೆ
    b. ಸರಿಯಾದ ವಿಷಯದ ಆಯ್ಕೆ
    c. ಸರಿಯಾದ ಪ್ರವರ್ಗದ ಆಯ್ಕೆ [SC, ST, Cat-I, IIA, IIB, IIIA, IIIB ಮತ್ತು PWD] ಗೆ ಆಧಾರವುಳ್ಳ ಪ್ರವರ್ಗದ ಪ್ರಮಾಣಪತ್ರವನ್ನು ಹೊಂದಿರಬೇಕು].

**(ಸೂಚನೆ: ಆನ್‌ಲೈನ್ ಅರ್ಜಿಯಲ್ಲಿ ಸೂಚಿಸುವ ಪ್ರವರ್ಗವೇ ಅಂತಿಮವಾಗಿರುತ್ತದೆ. ಯಾವುದೇ ಕಾರಣಕ್ಕೂ ಮುಂದೆ ಪ್ರವರ್ಗದ ಬದಲಾವಣೆ ಮಾಡುವ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ).**

11. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
12. ಯಾವುದೇ ರೀತಿಯ ನಕಾರಾತ್ಮಕ **(Negetive mark) ಅಂಕಗಳು ಇರುವುದಿಲ್ಲ.**
13. ಪರೀಕ್ಷಾ ಕೇಂದ್ರಕ್ಕೆ ತರಬೇಕಾದ ದಾಖಲೆಗಳು

- ಅಭ್ಯರ್ಥಿಗಳು ಈ ಕೆಳಗಿನ ದಾಖಲೆಗಳನ್ನು ಪರೀಕ್ಷಾ ಕೇಂದ್ರಕ್ಕೆ ತರಬೇಕು.
- ಕೆಎಸ್‌ಇಟಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಲಾದ ಪ್ರವೇಶ ಪತ್ರದ ಮುದ್ರಿತ ಪ್ರತಿ. ಪರೀಕ್ಷೆಯ ಸಮಯದಲ್ಲಿ ಹಾಜರಾತಿ ಹಾಳೆಯಲ್ಲಿ ನಿರ್ದಿಷ್ಟ ಜಾಗದಲ್ಲಿ ಅಂಟಿಸಲು ಒಂದು ಪಾಸ್‌ಪೋರ್ಟ್ ಅಳತೆಯ ಬಾವಚಿತ್ರ (ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಅಪ್‌ಲೋಡ್ ಮಾಡಿದಂತೆಯೇ) ಯಾವುದೇ ಪೋಟೊ ಐಡಿಗಳು (ಮೂಲ, ಮಾನ್ಯ ಮತ್ತು ಅವಧಿ ಮೀರಬಾರದು) – ಪಾನ್ ಕಾರ್ಡ್/ ಚಾಲನಾ ಪರವಾನಗಿ / ಮತದಾರರ ಗುರುತಿನ ಚೀಟಿ/ ಪಾಸ್‌ಪೋರ್ಟ್ / ಆಧಾರ್ ಕಾರ್ಡ್ / ಆಧಾರ್ ದಾಖಲಾತಿ ಸಂಖ್ಯೆ/ ಪಡಿತರ ಚೀಟಿ) – ಪೋಟೊ ಗುರುತಿನ ಹೆಸರು ಅಡ್ಮಿಟ್ ಕಾರ್ಡ್‌ನಲ್ಲಿ ತೋರಿಸಿರುವ ಹೆಸರಿನೊಂದಿಗೆ ಹೊಂದಿಕೆಯಾಗಬೇಕು.
- ಪ್ರವೇಶ ಪತ್ರದಲ್ಲಿ ಅಥವಾ ಬೇರೆ ಯಾವುದೇ ಕಾಗದದಲ್ಲಿ ಅಭ್ಯರ್ಥಿಗಳಿಗೆ ಏನನ್ನೂ ಬರೆಯಲು ಅನುಮತಿಸುವುದಿಲ್ಲ.
- ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಲು ಮತ್ತು ಪರೀಕ್ಷೆಯ ಸಮಯದಲ್ಲಿ ಅವುಗಳನ್ನು ಅನುಸರಿಸಲು ಸೂಚಿಸಲಾಗುತ್ತದೆ.

| |
|---|
| ಮದುವೆಯಂತಹ ಘಟನೆಗಳಿಂದಾಗಿ ಹೆಸರನ್ನು ಬದಲಾಯಿಸಿದ್ದರೆ, ಅಭ್ಯರ್ಥಿಯು ಪರೀಕ್ಷೆಯ ಸಮಯದಲ್ಲಿ ಸಂಬಂಧಿತ ದಾಖಲೆಯನ್ನು ತೋರಿಸಬೇಕು. ಮದುವೆ ಪ್ರಮಾಣಪತ್ರ / ವಿಚ್ಛೇಧನ ಪ್ರಮಾಣ ಪತ್ರ/ ತೀರ್ಪು/ ಕಾನೂನಿನ ಪ್ರಕಾರ ಹೆಸರು ಬದಲಾವಣೆ ಮಾಡಿರುವ ದಾಖಲೆ. |

- ಪಿಡಬ್ಲ್ಯೂಡಿ ವರ್ಗದ ಅಡಿಯಲ್ಲಿ ವಿನಾಯಿತಿ ಪಡೆಯುವುದಾದರೆ ಸಮರ್ಥ ಪ್ರಾಧಿಕಾರವು ನೀಡುವ ಪಿಡಬ್ಲ್ಯೂಡಿ ಪ್ರಮಾಣ ಪತ್ರವನ್ನು ಹೊಂದಿರಬೇಕು.

14. ಪರೀಕ್ಷಾ ಕೇಂದ್ರದಲ್ಲಿ ನಿಷೇಧಿತ ವಸ್ತುಗಳು:

- ಪರೀಕ್ಷಾ ಕೇಂದ್ರದೊಳಗೆ ಅಭ್ಯರ್ಥಿಗಳಿಗೆ ಯಾವುದೇ ಸಾಮಾನುಗಳನ್ನು ತರಲು ಅವಕಾಶವಿಲ್ಲ. ಆವರಣದಲ್ಲಿ ಕಳವು ಅಥವಾ ಕಳೆದುಹೋದ ಯಾವುದೇ ವಸ್ತುಗಳಿಗೆ ಕೆಎಸ್ಇಟಿ ಜವಾಬ್ದಾರನಾಗಿರುವುದಿಲ್ಲ.
- ಅಭ್ಯರ್ಥಿಗಳು ಕ್ಯಾಲ್ಕುಲೇಟರ್, ಮುದ್ರಿತ ಅಥವಾ ಲಿಖಿತ ವಸ್ತುಗಳು, ಕಾಗದದ ಬಿಟ್‌ಗಳು, ಮೊಬೈಲ್ ಫೋನ್, ಬ್ಲ್ಯೂ ಟೂತ್, ಪೇಜರ್ ಅಥವಾ ಇನ್ನಾವುದೇ ಪಠ್ಯ ಸಾಮಾಗ್ರಿಗಳು, ಡಾಕ್ಯೂ ಪೆನ್, ಲಾಗ್ ಟೇಬಲ್‌ಗಳು, ಎಲೆಕ್ಟ್ರಾನಿಕ್ ಕೈಗಡಿಯಾರಗಳು, ಎಲೆಕ್ಟ್ರಾನಿಕ್ ಗ್ಯಾಜೆಟ್ ಇತ್ಯಾದಿ ಸಾಧನಗಳನ್ನು ಪರೀಕ್ಷಾ ಕೇಂದ್ರದೊಳಗೆ ಸಾಗಿಸಲು ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಯಾವುದೇ ರೀತಿಯ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು/ ಸಾಧನವನ್ನು ಪರೀಕ್ಷಾ ಕೊಠಡಿ/ ಸಭಾಂಗಣದಲ್ಲಿ ತರಲು ನಿಷೇಧಿಸಲಾಗಿದೆ. ಯಾವುದೇ ಅಭ್ಯರ್ಥಿಯು ಮೇಲಿನ ಯಾವುದೇ ವಸ್ತುವನ್ನು ಹೊಂದಿರುವುದು ಕಂಡುಬಂದಲ್ಲಿ, ಅವನ/ಅವಳ ಉಮೇದುವಾರಿಕೆಯನ್ನು ರದ್ದುಪಡಿಸಿದಂತೆ ಪರಿಗಣಿಸಲಾಗುತ್ತದೆ ಮತ್ತು ಭವಿಷ್ಯದ ಪರೀಕ್ಷೆ (ಗಳ) ಗೆ ಸಹ ನಿರ್ಬಂಧಿಸಲಾಗುತ್ತದೆ. ಅಂತಹ ವಸ್ತುಗಳನ್ನು ವಶಪಡಿಸಿಕೊಳ್ಳಲಾಗುವುದು ಮತ್ತು ಪ್ರಕರಣವನ್ನು 'ಅನ್ಯಾಯದ ವಿಧಾನ'ಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.
- ಯಾವುದೇ ಅಭ್ಯರ್ಥಿಯು ಕೇಂದ್ರ ಅಧೀಕ್ಷಕರ ಅಥವಾ ಸಂಬಂಧಪಟ್ಟ ಕೊಠಡಿ ಮೇಲ್ವಿಚಾರಕರ ವಿಶೇಷ ಅನುಮತಿಯಿಲ್ಲದೆ, ಪತ್ರಿಕೆಯ ಪೂರ್ಣ ಅವಧಿ ಮುಗಿಯುವವರೆಗೆ ತಮ್ಮ ಆಸನ ಅಥವಾ ಪರೀಕ್ಷಾ ಕೊಠಡಿ/ ಸಭಾಂಗಣವನ್ನು ಬಿಡುವಂತಿಲ್ಲ. ಕೇಂದ್ರ ಅಧೀಕ್ಷಕರು/ ಕೊಠಡಿ ಮೇಲ್ವಿಚಾರಕರ ಸೂಚನೆಗಳಂತೆ ಅಭ್ಯರ್ಥಿಗಳು ಕಟ್ಟುನಿಟ್ಟಾಗಿ ಸೂಚನೆಗಳನ್ನು ಪಾಲಿಸಬೇಕು. ಕೊಠಡಿ/ ಸಭಾಂಗಣದಲ್ಲಿ ಕರ್ತವ್ಯದಲ್ಲಿರುವ ಕೊಠಡಿ ಮೇಲ್ವಿಚಾರಕರಿಗೆ ಅಭ್ಯರ್ಥಿಗಳು ತಮ್ಮ ಒ.ಎಮ್.ಆರ್ (OMR) ಹಾಳೆಗಳನ್ನು ಹಸ್ತಾಂತರಿಸದೇ ಕೊಠಡಿ/ ಸಭಾಂಗಣದಿಂದ ಹೊರಹೋಗಬಾರದು.
- ಪರೀಕ್ಷಾ ಕೊಠಡಿ/ ಸಭಾಂಗಣದಲ್ಲಿ ಧೂಮಪಾನ, ಗುಟ್ಕಾ ಜಗಿಯುವುದು, ಉಗುಳುವುದು ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
- ಚಹಾ, ಕಾಫಿ, ತಂಪು ಪಾನೀಯಗಳು, ತಿಂಡಿಗಳು ಅಥವಾ ತಿನ್ನಬಹುದಾದ ವಸ್ತುಗಳನ್ನು ಪರೀಕ್ಷೆಯ ಸಮಯದಲ್ಲಿ ಪರೀಕ್ಷಾ ಕೊಠಡಿ/ ಸಭಾಂಗಣದೊಳಗೆ ತೆಗೆದುಕೊಳ್ಳಲು ಅನುಮತಿಸುವುದಿಲ್ಲ.
- ಮಧುಮೇಹದಿಂದ ಬಳಲುತ್ತಿರುವ ಅಭ್ಯರ್ಥಿಗಳಿಗೆ ತಿನ್ನಬಹುದಾದ ಸಕ್ಕರೆ ಮಾತ್ರೆಗಳು/ ಹಣ್ಣುಗಳು (ಬಾಳೆಹಣ್ಣು/ ಸೇಬು/ ಕಿತ್ತಳೆ ಮುಂತಾದವು) ಮತ್ತು ಪಾರದರ್ಶಕ ನೀರಿನ ಬಾಟಲಿಯಂತಹ ವಸ್ರುಗಳನ್ನು ಪರೀಕ್ಷಾ ಸಭಾಂಗಣಕ್ಕೆ ಕೊಂಡೊಯ್ಯಲು ಅವಕಾಶವಿದೆ. ಆದಾಗ್ಯೂ ಚಾಕೋಲೇಟ್/ ಕ್ಯಾಂಡಿ/ ಸ್ಯಾಂಡ್‌ವಿಚ್ ಮುಂತಾದ ಪ್ಯಾಕ್ ಮಾಡಿದ ಆಹಾರವನ್ನು ಸಾಗಿಸಲು ಅವರಿಗೆ ಅನುಮತಿಸಲಾಗುವುದಿಲ್ಲ.
- ಕ್ಯಾಲ್ಕುಲೇಟರ್ ಅಥವಾ ಲಾಗ್ – ಟೇಬಲ್‌ಗಳ ಬಳಕೆಯನ್ನು ಅನುಮತಿಸಲಾಗುವುದಿಲ್ಲ. ಮೊಬೈಲ್ ಪೋನ್‌ಗಳು, ಪೇಜರ್‌ಗಳು, ಎಲೆಕ್ಟ್ರಾನಿಕ್ ಸಾಧನಗಳು, ಕಾಗದದ ಚೂರುಗಳು, ಪುಸ್ತಕ/ ಟಿಪ್ಪಣಿ ಪುಸ್ತಕಗಳು ಇತ್ಯಾದಿಗಳನ್ನು ಪರೀಕ್ಷಾ ಕೊಠಡಿಯೊಳಗೆ ಅನುಮತಿಸಲಾಗುವುದಿಲ್ಲ. ಪರೀಕ್ಷಾ ಸಭಾಂಗಣ/ ಕೊಠಡಿಯೊಳಗೆ ಈ ಯಾವುದೇ ವಸ್ತುಗಳನ್ನು ಹೊಂದಿರುವ ಅಭ್ಯರ್ಥಿಯನ್ನು (ರು)

ಅನ್ಯಾಯದ ವಿಧಾನವೆಂದು ಪರಿಗಣಿಸಲಾಗುತ್ತದೆ ಮತ್ತು ಅವನ/ಅವಳ ಫಲಿತಾಂಶವನ್ನು ಘೋಷಿಸಲಾಗುವುದಿಲ್ಲ.

15. **ವರದಿ ಮಾಡುವ ಸಮಯ ಮತ್ತು ಇತರ ಪ್ರಮುಖ ಸೂಚನೆಗಳು**

- ಅಭ್ಯರ್ಥಿಗಳು ಪರೀಕ್ಷೆ ಪ್ರಾರಂಭವಾಗುವ ಎರಡು ಗಂಟೆಗಳ ಮೊದಲು ಪರೀಕ್ಷಾ ಕೇಂದ್ರದಲ್ಲಿ ವರದಿ ಮಾಡಬೇಕು.
- ಬೆಳಿಗ್ಗೆ 9.00 ರ ನಂತರ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.
- ಅಭ್ಯಥಿಗಳು ಪ್ರವೇಶ ಪತ್ರದಲ್ಲಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಬೇಕು ಮತ್ತು ಪರೀಕ್ಷೆಯ ಸಮಯದಲ್ಲಿ ಅವುಗಳನ್ನು ಅನುಸರಿಸಲು ಸೂಚಿಸಲಾಗುತ್ತದೆ.
- ಪರೀಕ್ಷಾ ಕೊಠಡಿಗಳು/ ಸಭಾಂಗಣವನ್ನು ತೆರೆದ ಕೂಡಲೆ ಅಭ್ಯರ್ಥಿಗಳು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು. ಯಾವುದೇ ಕಾರಣಗಳಿಂದಾಗಿ ಅಭ್ಯರ್ಥಿಗಳು ಸಮಯಕ್ಕೆ ಸರಿಯಾಗಿ ವರದಿ ಮಾಡಿಕೊಳ್ಳದಿದ್ದರೆ, ಅಂದರೆ ಟ್ರಾಫಿಕ್ ಜಾಮ್, ರೈಲು/ ಬಸ್ ವಿಳಂಬ ಇತ್ಯಾದಿ ಕಾರಣಗಳನ್ನು ನೀಡಬಾರದು. ಅವರು ಪರೀಕ್ಷಾ ಕೊಠಡಿಗಳಲ್ಲಿ/ ಸಭಾಂಗಣಗಳಲ್ಲಿ ನೀಡುವ ಕೆಲವು ಸಾಮಾನ್ಯ ಸೂಚನೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಯಾವುದೇ ವಿಳಂಬಕ್ಕೆ ಕೆಎಸ್ಇಟಿ ಜವಾಬ್ದಾರನಾಗಿರುವುದಿಲ್ಲ.
- ಅಭ್ಯರ್ಥಿಯು ಪರೀಕ್ಷಾ ಕೊಠಡಿ / ಸಭಾಂಗಣದಲ್ಲಿ ಪ್ರವೇಶಕ್ಕಾಗಿ ಕೆಎಸ್ಇಟಿ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿ ಮುದ್ರಿಸಿದ ಪ್ರವೇಶ ಪತ್ರವನ್ನು ಕೊಠಡಿ ಪರಿವೀಕ್ಷಕರ ಬೇಡಿಕೆಯ ಮೇರೆಗೆ ತೋರಿಸಬೇಕು. ಕರ್ತವ್ಯದಲ್ಲಿರುವ ಕೊಠಡಿಯ ಮೇಲ್ವಿಚಾರಕರು ಅಭ್ಯರ್ಥಿಗಳ ಗುರುತನ್ನು ಪರಿಶೀಲಿಸಲು ಅಧಿಕಾರ ಹೊಂದಿದ್ದಾರೆ ಮತ್ತು ಗುರುತಿನ ರುಜುವಾತುಗಳನ್ನು ಪರಿಶೀಲಿಸಲು ಮತ್ತು ಧೃಡೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸಹಕಾರವನ್ನು ನೀಡಲು ಕೋರಲಾಗಿದೆ. ಪ್ರವೇಶ ಪತ್ರ ಹೊಂದಿರದ ಅಭ್ಯರ್ಥಿಯನ್ನು ಯಾವುದೇ ಸಂದರ್ಭದಲ್ಲೂ ಕೇಂದ್ರ ಅಧೀಕ್ಷಕರು ಪರೀಕ್ಷೆಯನ್ನು ಬರೆಯಲು ಅನುಮತಿಸುವುದಿಲ್ಲ.
- ಅಭ್ಯರ್ಥಿಗೆ ಕ್ರಮ ಸಂಖ್ಯೆಯನ್ನು ಸೂಚಿಸಿ ಆಸನದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಅಭ್ಯರ್ಥಿಗಳು ತಮ್ಮ ನಿಗದಿಪಡಿಸಿದ ಸೀಟಿನಲ್ಲಿ ಮಾತ್ರ ಕುಳಿತುಕೊಳ್ಳಬೇಕು. ಒಂದು ವೇಳೆ ಅಭ್ಯರ್ಥಿಯು ಕೊಠಡಿ/ ಸಭಾಂಗಣವನ್ನು ಅಥವಾ ಅವನ/ ಅವಳ ಆಸನವನ್ನು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಬದಲಾಯಿಸಿದರೆ, ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ ಮತ್ತು ಅದಕ್ಕಾಗಿ ಯಾವುದೇ ಮನವಿಯನ್ನು ಸ್ವೀಕರಿಸಲಾಗುವುದಿಲ್ಲ.
- ಅಭ್ಯರ್ಥಿಯ ಪ್ರಶ್ನೆ ಪತ್ರಿಕೆಯು ಅವನ/ ಅವಳ ಆಯ್ಕೆಮಾಡಿದ ವಿಷಯವನ್ನು ಹೊರತುಪಡಿಸಿ ಬೇರೆ ವಿಷಯದಲ್ಲಿ ಇದ್ದರೆ ಅದನ್ನು ಸಂಬಂಧಪಟ್ಟ ಕೊಠಡಿಯ ಮೇಲ್ವಿಚಾರಕರ ಗಮನಕ್ಕೆ ತರಬಹುದು.
- ಯಾವುದೇ ಕಾರಣಕ್ಕಾಗಿ ನಿಗದಿತ ಪರೀಕ್ಷೆಯ ದಿನಾಂಕದಂದು ಹಾಜರಾಗಲು ಸಾಧ್ಯವಾಗದ ಅಭ್ಯರ್ಥಿಗಳಿಗೆ, ಮರು–ಪರೀಕ್ಷೆಯನ್ನು ಯಾವುದೇ ಸಂದಂರ್ಭದಲ್ಲೂ ಕೆಎಸ್ಇಟಿ ಕೇಂದ್ರವು ನಡೆಸುವುದಿಲ್ಲ.

16. **ಅನ್ಯಾಯದ ಅರ್ಥಗಳು :**

- ಅಭ್ಯರ್ಥಿಗಳನ್ನು ಕೆಎಸ್ಇಟಿಯ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಂದ

ನಿಯಂತ್ರಿಸಲಾಗುತ್ತದೆ. ಅನ್ಯಾಯದ ಎಲ್ಲಾ ಪ್ರಕರಣಗಳನ್ನು ನಿಯಮಗಳ ಪ್ರಕಾರ ಪರಿಗಣಿಸಲಾಗುತ್ತದೆ.

- ಅಭ್ಯರ್ಥಿಗಳು ಪರೀಕ್ಷಾ ಕೊಠಡಿ/ ಹಾಲ್‌ನಲ್ಲಿ ಕೊಠಡಿಯ ಮೇಲ್ವಿಚಾರಕರು ನೀಡಿದ ಸೂಚನೆಗಳನ್ನು ಪಾಲಿಸಬೇಕು ಮತ್ತು ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯದಲ್ಲಿರುವ ಕೊಠಡಿಯ ಮೇಲ್ವಿಚಾರಕರು ಅಥವಾ ಇತರ ಸಿಬ್ಬಂದಿಗಳೊಂದಿಗೆ ವಾದ ಮಾಡಬಾರದು. ಸೂಚನೆಗಳನ್ನು ಪಾಲಿಸದ ಅಭ್ಯರ್ಥಿಗಳನ್ನು ಅನ್ಯಾಯದ ವಿಧಾನವೆಂದು ಪರಿಗಣಿಸಲಾಗುತ್ತದೆ ಮತ್ತು ಅವನ/ ಅವಳ ಫಲಿತಾಂಶವನ್ನು ಘೋಷಿಸಲಾಗುವುದಿಲ್ಲ.
- ಪರೀಕ್ಷಾ ಹಾಲ್/ ಕೊಠಡಿಯಲ್ಲಿ ಅಭ್ಯರ್ಥಿಗಳು ಪರಸ್ಪರ ಮಾತನಾಡುವಂತಿಲ್ಲ ಅಥವಾ ಪರೀಕ್ಷೆಯ ಸಮಯದಲ್ಲಿ ಯಾವುದೇ ವಿಷಯವನ್ನು ಚರ್ಚಿಸುವಂತಿಲ್ಲ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಮಾತನಾಡಿದರೆ ಇತರ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತದೆ ಮತ್ತು ಪರೀಕ್ಷೆಯ ಸಮಯದಲ್ಲಿ ಸಂಪೂರ್ಣ ಮೌನ ಕಾಯ್ದುಕೊಳ್ಳಬೇಕು. ಈ ಸೂಚನೆಗಳನ್ನು ಉಲ್ಲಂಘಿಸುವ ಅಭ್ಯರ್ಥಿಯನ್ನು ಅನ್ಯಾಯದ ವಿಧಾನವೆಂದು ಪರಿಗಣಿಸಲಾಗುತ್ತದೆ ಮತ್ತು ಅವನ/ ಅವಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.
- ಅಭ್ಯರ್ಥಿಗಳು ಪರೀಕ್ಷೆಯ ಸಮಯದಲ್ಲಿ ಯಾವುದೇ ರೀತಿಯ ಸಹಾಯನ್ನು ಪಡೆಯಲು ಅಥವಾ ಸಹಾಯವನ್ನು ಮಾಡಲು ಪ್ರಯತ್ನಿಸಬಾರದು. ಇದು ಪರೀಕ್ಷಾ ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಈ ರೀತಿ ಮಾಡಿದರೆ ಅವರನ್ನು ಪರೀಕ್ಷೆಯಿಂದ ಉಚ್ಚಾಟನೆ ಮಾಡಬಹುದು ಅಥವಾ ಅವರ ಉಮೇದುವಾರಿಕೆಯನ್ನು ರದ್ದುಪಡಿಸಲಾಗುತ್ತದೆ.
- ಅಭ್ಯರ್ಥಿಗಳು ಅನ್ಯಾಯದ ವಿಧಾನಗಳನ್ನು ಬಳಸಿ ಅಥವಾ ಸೋಗು ಹಾಕುವಿಕೆಯನ್ನು ಕಂಡುಕೊಂಡರೆ, ಅವನ/ ಅವಳ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ ಅಪರಾಧದ ಸ್ವರೂಪಕ್ಕೆ ಅನುಗುಣವಾಗಿ ಶಾಶ್ವತವಾಗಿ ಅಥವಾ ನಿಗದಿತ ಅವಧಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವನು/ ಅವಳು ನಿರ್ಬಂಧಿಸಲ್ಪಡುತ್ತಾರೆ.
- ಅಭ್ಯರ್ಥಿಯು ಪರೀಕ್ಷಾ ಕೊಠಡಿ/ ಸಭಾಂಗಣದಲ್ಲಿ ಪ್ರವೇಶಕ್ಕಾಗಿ ಕೆಎಸ್‌ಇಟಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿದ / ಮುದ್ರಿಸಿದ ಪ್ರವೇಶ ಪತ್ರವನ್ನು ಬೇಡಿಕೆಯಂತೆ ತೋರಿಸಬೇಕು. ಕರ್ತವ್ಯದಲ್ಲಿರುವ ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಅಭ್ಯರ್ಥಿಗಳ ಗುರುತನ್ನು ಪರಿಶೀಲಿಸಲು ಅಧಿಕಾರವಿದೆ ಮತ್ತು ದೃಢೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸಹಕಾರರವನ್ನು ನೀಡಲು ಕೋರಲಾಗಿದೆ. ಪ್ರವೇಶ ಪತ್ರ ಹೊಂದಿರದ ಅಭ್ಯರ್ಥಿಯನ್ನು ಯಾವುದೇ ಸಂದರ್ಭದಲ್ಲೂ ಕೇಂದ್ರ ಅಧೀಕ್ಷಕರು ಪರೀಕ್ಷೆಗೆ ಅನುಮತಿಸುವುದಿಲ್ಲ.
- ಅಭ್ಯರ್ಥಿಯ ಕ್ರಮ ಸಂಖ್ಯೆಯನ್ನು ಸೂಚಿಸುವ ಆಸನವನ್ನು ವ್ಯವಸ್ಥೆ ಮಾಡಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನಿಗದಿಪಡಿಸಿದ ಸೀಟಿನಲ್ಲಿ ಮಾತ್ರ ಕುಳಿತುಕೊಳ್ಳಬೇಕು. ಒಂದು ವೇಳೆ ಅಭ್ಯರ್ಥಿಯು ಕೊಠಡಿಯನ್ನು / ಸಭಾಂಗಣವನ್ನು ಅಥವಾ ಅವನ/ಅವಳ ಆಸನವನ್ನು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಬದಲಾಯಿಸಿದರೆ, ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ ಮತ್ತು ಅದಕ್ಕಾಗಿ ಯಾವುದೇ ಮನವಿಯನ್ನು ಸ್ವೀಕರಿಸಲಾಗುವುದಿಲ್ಲ.
- ಅಭ್ಯರ್ಥಿಯು ಯಾವುದೇ ತಾಂತ್ರಿಕ ನೆರವು, ಮೊದಲ ಮತ್ತು ತುರ್ತು ಅಥವಾ ಪರೀಕ್ಷೆಯ ಸಮಯದಲ್ಲಿ ಯಾವುದೇ ಇತರ ಮಾಹಿತಿಗಾಗಿ ಕೊಠಡಿಯಲ್ಲಿರುವ ಕೇಂದ್ರ ಅಧೀಕ್ಷಕರ/ ಕೊಠಡಿಯ ಮೇಲ್ವಿಚಾರಕರನ್ನು ಸಂಪರ್ಕಿಸಬಹುದು.

17. ಅಭ್ಯರ್ಥಿಗಳು ಪರೀಕ್ಷೆಯನ್ನು ಪ್ರಾರಂಭಿಸುವ ಎರಡು ಗಂಟೆ ಮೊದಲು ಪರೀಕ್ಷಾ ಕೇಂದ್ರದಲ್ಲಿ ವರದಿ ಮಾಡಬೇಕು ಮತ್ತು ಕೊಠಡಿಯ ಮೇಲ್ವಿಚಾರಕರೊಂದಿಗೆ ಸಹಕರಿಸಬೇಕು. ಪರೀಕ್ಷೆ ಪ್ರಾರಂಭವಾದ ನಂತರ ಯಾವುದೇ ಅಭ್ಯರ್ಥಿಯನ್ನು ಪರೀಕ್ಷಾ ಕೇಂದ್ರ / ಸಭಾಂಗಣಕ್ಕೆ ಪ್ರವೇಶಿಸಲು ಅನುಮತಿಸುವುದಿಲ್ಲ. ಮೊದಲ ಅಧಿವೇಶನದಲ್ಲಿ ಬೆಳಿಗ್ಗೆ 11 ಗಂಟೆಗೆ ಮತ್ತು ಎರಡನೇ ಅಧಿವೇಶನದಲ್ಲಿ ಮಧ್ಯಾಹ್ನ 1.00 ಕ್ಕೆ ಮೊದಲು ಯಾವುದೇ ಅಭ್ಯರ್ಥಿಯನ್ನು ಪರೀಕ್ಷಾ ಹಾಲ್ / ಕೊಠಡಿಯಿಂದ ಹೊರಹೋಗಲು ಅನುಮತಿಸುವುದಿಲ್ಲ.
18. ಪರೀಕ್ಷಾ ಕಿರುಪುಸ್ತಕದೊಂದಿಗೆ ಒದಗಿಸಲಾದ ಆಪ್ಟಿಕಲ್ ಮಾರ್ಕ್ ರೀಡರ್ (ಒಎಂಆರ್) ಹಾಳೆಯಲ್ಲಿನ ಪ್ರಶ್ನೆಗಳಿಗೆ ಅಭ್ಯರ್ಥಿಯು ಉತ್ತರಗಳನ್ನು ಗುರುತಿಸಬೇಕಾಗುತ್ತದೆ.
19. ಪರೀಕ್ಷಾ ಹಾಲ್/ ಕೊಠಡಿಯಿಂದ ಹೊರಡುವ ಮೊದಲು ಅಭ್ಯರ್ಥಿಯು ಮೂಲ ಒಎಂಆರ್ ಹಾಳೆಗಳನ್ನು ಕೊಠಡಿಯ ಮೇಲ್ವಿಚಾರಕರಿಗೆ ಹಿಂದಿರುಗಿಸಬೇಕು. ಆದಾಗ್ಯೂ, ಅಭ್ಯರ್ಥಿಗಳು ಪತ್ರಿಕೆ – 1 ಮತ್ತು ಪತ್ರಿಕೆ – 2 ರ ಪರೀಕ್ಷಾ ಕಿರುಪುಸ್ತಕವನ್ನು ಒಎಂಆರ್ ಹಾಳೆಯ ನಕಲಿ ಪ್ರತಿ (ಕಾರ್ಬನ್ ರಹಿತ ನಕಲು) ಜೊತೆಗೆ ತೆಗೆದುಕೊಳ್ಳಲು ಅನುಮತಿಸಲಾಗಿದೆ.

20. ಅಭ್ಯರ್ಥಿಯು – ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಾಚಾರಗಳು / ಬರವಣಿಗೆಯ ಕೆಲಸಗಳನ್ನು ಪರೀಕ್ಷಾ ಕೊಠಡಿ / ಸಭಾಂಗಣದಲ್ಲಿ ಒದಗಿಸಿರುವ ಪ್ರಶ್ನೆ ಪುಸ್ತಿಕೆಯ ಹೆಚ್ಚುವರಿ ಹಾಳೆಯಲ್ಲಿ ಮಾತ್ರ ಮಾಡಬೇಕು ಮತ್ತು ಪರೀಕ್ಷೆಯ ನಂತರ ಅದನ್ನು ಕೊಠಡಿಯ ಮೇಲ್ವಿಚಾರಕರಿಗೆ ಹಸ್ತಾಂತರಿಸಬೇಕು.

21. ವಿಕಲಚೇತನ ಅಭ್ಯರ್ಥಿಗಳು (PWD) –VH (ದೃಷ್ಟಿದೋಷವುಳ್ಳ) PH (ಅಂಗವಿಕಲ) ಪತ್ರಿಕೆ–I ಕ್ಕೆ 20 ನಿಮಿಷಗಳು ಮತ್ತು ಪತ್ರಿಕೆ–II ಕ್ಕೆ, 40 ನಿಮಿಷಗಳ ಹೆಚ್ಚುವರಿ ಕಾಲಾವದಿಯನ್ನು ನೀಡಲಾಗುವುದು. ಸ್ವತಃ ಪರೀಕ್ಷೆ ಬರೆಯಲಾಗದ ಅಭ್ಯರ್ಥಿಗಳಿಗೆ ಅವರು ಆಯ್ದುಕೊಂಡ ವಿಷಯವನ್ನು ಪದವಿ ಹಂತದಲ್ಲಿ ವ್ಯಾಸಂಗ / ಅಧ್ಯಯನ ಮಾಡಿರದ ಒಬ್ಬ ಪದವೀಧರ ಬರವಣಿಗೆದಾರರ ನೆರವನ್ನು ನೀಡಲಾಗುವುದು. ಬರವಣಿಗೆದಾರರ ನೆರವನ್ನು ಪಡೆಯಬಯಸುವವರು ಪರೀಕ್ಷೆಗೆ 10 ದಿನಗಳ ಮುನ್ನವೇ ಆಯಾ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಯವರಿಗೆ ಲಿಖಿತ ಮನವಿ ಸಲ್ಲಿಸಬೇಕು. ಸ್ವತಃ ಬರಹಗಾರರನ್ನು ಕರೆತರುವ ಅಭ್ಯರ್ಥಿಗಳು ಬರಹಗಾರರ ವಿದ್ಯಾರ್ಹತೆಗೆ ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಲಿಖಿತ ಪತ್ರದೊಂದಿಗೆ 10 ದಿನಗಳ ಮುನ್ನವೇ ಬರಹಗಾರರನ್ನು ಆಯಾ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಯವರಿಗೆ ಭೇಟಿ ಮಾಡಿಸಿ ಅವರ ಒಪ್ಪಿಗೆಯನ್ನು ಪಡೆಯಬೇಕು. ಹೆಚ್ಚಿನ ಅವಧಿ ಹಾಗೂ ಬರವಣಿಗೆದಾರರನ್ನು ಇತರ ಅಂಗವಿಕಲ ಅಭ್ಯರ್ಥಿಗಳಿಗೆ ಒದಗಿಸಲಾಗುವುದಿಲ್ಲ.

22. ಅಭ್ಯರ್ಥಿಗಳಿಗೆ ಕೆಎಸ್ಇಟಿ **(KSET)** ಪರೀಕ್ಷೆಯ ಪೂರ್ಣಮಾಹಿತಿಯನ್ನು ಕೆಎಸ್ಇಟಿ ಅಂತರ್ಜಾಲದಲ್ಲಿ **http://kset.uni-mysore.ac.in** ಅಭ್ಯರ್ಥಿಯ ಮಾರ್ಗದರ್ಶನ, ಮಾದರಿ ಓ.ಎಮ್.ಆರ್ ಮತ್ತು ಅದನ್ನು ಬಳಸುವ ರೀತಿಯನ್ನು ತಿಳಿಸಲಾಗಿರುತ್ತದೆ ಹಾಗೂ ಅಭ್ಯಥಿಗಳಿಗೆ ಅಂಚೆ ಮೂಲಕ ಯಾವುದೇ ಮಾಹಿತಿಯ ಪ್ರತಿಯನ್ನು ನೀಡಲಾಗುವುದಿಲ್ಲ.

23. ಮರುಮೌಲ್ಯಮಾಪನಕ್ಕೆ ಅಥವಾ ಮರು ಎಣಿಕೆಗೆ ಅವಕಾಶವಿರುವುದಿಲ್ಲ.

24. ಕೆಸೆಟ್ ಪರೀಕ್ಷೆಯ ತಾತ್ಕಾಲಿಕ ಕೀ ಉತ್ತರಗಳನ್ನು ಕೆಎಸ್ಇಟಿ ಅಂತರ್ಜಾಲದಲ್ಲಿ ಪರೀಕ್ಷೆ ಮುಗಿದ ಒಂದು ವಾರದ ನಂತರ ಪ್ರಕಟಿಸಲಾಗುವುದು. **http://kset.uni-mysore.ac.in** ತಾತ್ಕಾಲಿಕ

ಕೀ ಉತ್ತರಗಳಲ್ಲಿ ತೃಪ್ತಿ ಹೊಂದದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೂಲಕ ಸವಾಲು ಹಾಕಬಹುದು. ಪ್ರತಿ ಪ್ರಶ್ನೆಗೆ ರೂ.1000/– ಮೊತ್ತವನ್ನು ಪಾವತಿಸಬೇಕು ಮತ್ತು ಸವಾಲು ಕೀ ಉತ್ತರ ಸರಿಯಾಗಿದ್ದರೆ ಅಂತಹ ಅಭ್ಯರ್ಥಿಗಳಿಗೆ ಶುಲ್ಕವನ್ನು ಮರುಪಾವತಿಸಲಾಗುವುದು.

25. **ಸವಾಲುಗಳ ಮೇಲಿನ ಕೆಸೆಟ್ ನಿರ್ಧಾರವೇ ಅಂತಿಮವಾಗಿರುತ್ತದೆ ಮತ್ತು ಅಂತಿಮ ಉತ್ತರ ಕೀಗಳ ಆಧಾರದ ಮೇಲೆ ಉತ್ತರಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿ ನಂತರ ಅಂತಿಮ ಕೆ–ಸೆಟ್ ಫಲಿತಾಂಶವನ್ನು ಪ್ರಕಟಿಸಲಾಗುವುದು.**

26. **ಅಭ್ಯರ್ಥಿಗಳು ಕೆಎಸ್ಇಟಿ (KSET) ಪರೀಕ್ಷೆಗೆ ಸಂಬಂಧಪಟ್ಟಂತೆ ಬಿಡುಗಡೆಗೊಳಿಸಿದ ಉತ್ತರಗಳ ಆಕ್ಷೇಪಣೆಗೆ ಸ್ಪಷ್ಟೀಕರಿಸಿ ಅಂತಿಮ ಉತ್ತರವನ್ನು ನೀಡಿ ಅಂತಿಮ ಫಲಿತಾಂಶವನ್ನು ಪ್ರಕಟಿಸಿದ ನಂತರ ಅಭ್ಯರ್ಥಿಗಳು ಪುನಃ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.**

27. ಎಲ್ಲಾ ವಿಷಯದಲ್ಲೂ ಕೆಎಸ್ಇಟಿ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

28. ಕೆಎಸ್ಇಟಿ **(KSET)** ಕೇಂದ್ರವು ಉತ್ತೀರ್ಣ/ಅನುತ್ತೀರ್ಣಗೊಂಡ ಅಭ್ಯರ್ಥಿಗಳಿಗೆ ಯಾವುದೇ ಅಂಕಪಟ್ಟಿಯನ್ನು ನೀಡುವುದಿಲ್ಲ.

29. ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಾದಲ್ಲಿ ಅದು ಯು.ಜಿ.ಸಿ.ಯ ನಿಯಮಗಳಿಗೆ ಒಳಪಟ್ಟಿರುತ್ತದೆ.

30. ಪರೀಕ್ಷೆಗೆ ಸಂಬಂಧಪಟ್ಟ ಯಾವುದೇ ವಿವಾದಗಳಿದ್ದಲ್ಲಿ, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ (High Court) ವ್ಯಾಪ್ತಿಗೆ ಒಳಪಟ್ಟಿರುತ್ತದೆ.

**ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿಮಾಡುವಾಗ ಗಮನಿಸಬೇಕಾದ ವಿವರಗಳು:**

ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವಾಗ ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳಬೇಕೆಂದು ಸೂಚನೆಗಳನ್ನು ನೀಡಲಾಗಿದೆ.

i. ಪ್ರಕಟಣೆಯಲ್ಲಿರುವಂತೆ **'ಅರ್ಹತಾ ನಿಯಮಗಳನ್ನು'** ಅಭ್ಯರ್ಥಿಗಳು ಪೂರೈಸಿರುವ ಬಗ್ಗೆ ಪರಿಶೀಲಿಸಿಕೊಳ್ಳಬೇಕು.

ii. SC/ST ಮತ್ತು ಪ್ರವರ್ಗ-I, IIA, IIB, IIIA, IIIB ಮತ್ತು PWD, ಅಭ್ಯರ್ಥಿಗಳು ಸಂಬಂಧಿಸಿದ ಮೀಸಲಾತಿಯನ್ನು ಸರಿಯಾಗಿ ನಿಗಧಿಪಡಿಸಿದ ಕಾಲಂನಲ್ಲಿ ಭರ್ತಿ ಮಾಡಲಾಗಿದೆಯೋ ಅಥವಾ ಇಲ್ಲವೇ ಎಂಬುವುದನ್ನು ಪರೀಕ್ಷಿಸಿಕೊಳ್ಳಬೇಕು.

iii. ಸರಿಯಾದ ವಿಷಯ ಹಾಗೂ ಪರೀಕ್ಷಾ ಕೇಂದ್ರವನ್ನು ಮತ್ತು ಕೋಡ್ ಆಯ್ಕೆ ಮಾಡಿ ಸಂಬಂಧಿಸಿದ ಕಾಲಂಗಳನ್ನು ಭರ್ತಿಮಾಡಿದೆಯೋ ಇಲ್ಲವೋ ಎಂಬುದನ್ನು ಗಮನಿಸಿಕೊಳ್ಳಬೇಕು.

iv. **PWD** ಅಭ್ಯರ್ಥಿಗಳು ಸಂಬಂಧಿಸಿದ ಕಾಲಂನ್ನು **Online**ನ ಅರ್ಜಿಯಲ್ಲಿ ಭರ್ತಿಮಾಡಲಾಗಿದೆಯೇ ಇಲ್ಲವೋ ಎಂಬುವುದನ್ನು ಖಚಿತಪಡಿಸಿಕೊಳ್ಳಬೇಕು. ಕೇವಲ PWD ಅಭ್ಯರ್ಥಿಗಳು ಮಾತ್ರ ಈ ಕಾಲಂನ್ನು ಭರ್ತಿಮಾಡತಕ್ಕದ್ದು,

v. ಸಲ್ಲಿಸಿರುವ ಮುದ್ರಿತ **Online** ಅರ್ಜಿಯೊಂದಿಗೆ ಲಗತ್ತಿಸಿರುವ ದಾಖಲೆ ಪ್ರತಿಗಳನ್ನು ಅಭ್ಯರ್ಥಿಗಳು ತಮ್ಮ ಹಿತದೃಷ್ಟಿಯಿಂದ ತಮ್ಮೊಡನೆ ಒಂದು ಪ್ರತಿಯನ್ನು ಇಟ್ಟುಕೊಳ್ಳಬೇಕು.

**ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಅರ್ಜಿ ಮತ್ತು ಇತರ ದಾಖಲೆಗಳನ್ನು ಗೆಝೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಸಲ್ಲಿಸಬೇಕಾದ ಅಡಕಗಳು ಈ ಕೆಳಗಿನಂತಿವೆ.**

ಅಭ್ಯರ್ಥಿಯು ತಮ್ಮ ಆನ್‌ಲೈನ್ **ಅರ್ಜಿಯ** ಮುದ್ರಿತ ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ಪ್ರತ್ಯೇಕ A-4 ಅಳತೆಯ ಕಾಗದದಲ್ಲಿ ಮುದ್ರಿಸಿ ಸಲ್ಲಿಸಬೇಕು.

a) ಅರ್ಜಿ (ಒಂದು ಪ್ರತಿ)
b) ಬ್ಯಾಂಕ್ ಚಲನ್ ಪ್ರತಿ (Xerox copy) ಅಥವಾ ಆನ್‌ಲೈನ್ ಪಾವತಿಯ ರಶೀದಿ.
c) ಅಭ್ಯರ್ಥಿಯ ಹೆಸರು ಮತ್ತು ಪೋಷಕರ ಹೆಸರನ್ನು ಪರಿಶೀಲಿಸಲು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅತ್ಯಗತ್ಯ
d) ಅಭ್ಯರ್ಥಿಗಳು SC/ST, ಪ್ರವರ್ಗ-1, IIA, IIB, IIIA, IIIB ಜಾತಿ ಮತ್ತು ಆದಾಯ ಪ್ರಮಾಣಪತ್ರ.
e) ವಿಕಲಚೇತನ ಅಭ್ಯರ್ಥಿಗಳು (PWD) **ಜಿಲ್ಲಾ ಸಿವಿಲ್ ಸರ್ಜನ್ ರವರಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಧೃಡೀಕರಿಸಿ ಲಗತ್ತಿಸಬೇಕು**. [ Medical Certificate with 40% or more disability].
f) ಅಂತಿಮ ವರ್ಷದ ಸ್ನಾತಕೋತ್ತರ ಪದವಿಯ ಧೃಡೀಕೃತ ಅಂಕಪಟ್ಟಿಯ ಪ್ರತಿ.
g) ಪರೀಕ್ಷಾ ಪ್ರಮಾಣಪತ್ರ (Result Sheet) ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಯನ್ನು ಸಲ್ಲಿಸಬೇಕು.

**ಪ್ರಕಟಣೆಯ ಮುದ್ರಣದಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಕೆಎಸ್‌ಇಟಿ ಕೇಂದ್ರವು ಜವಾಬ್ದಾರಿಯಲ್ಲ.**

# ಕೆ–ಸೆಟ್ ಪರೀಕ್ಷೆ ೧೧ನೇ ಏಪ್ರಿಲ್, ೨೦೨೧ ರ ಕಾಲಾವಧಿ ವೇಳಾಪಟ್ಟಿ

| ವಿವರಗಳು | ಪತ್ರಿಕೆ – ೧ | ಪತ್ರಿಕೆ – ೨ |
|---|---|---|
| ಪರೀಕ್ಷೆ ನಡೆಯುವ ದಿನಾಂಕ | ೧೧.೦೪.೨೦೨೧ (ಭಾನುವಾರ) | ೧೧.೦೪.೨೦೨೧ (ಭಾನುವಾರ) |
| ಪರೀಕ್ಷಾ ಕೊಠಡಿ ಒಳಗೆ ಪ್ರವೇಶ | ೦೮.೦೦ ಬೆಳ್ಳಿಗ್ಗೆ (ಭಾ.ಮಾ.ಕಾ) | ೧೦.೪೫ ಬೆಳ್ಳಿಗ್ಗೆ (ಭಾ.ಮಾ.ಕಾ) |
| ಪರೀಕ್ಷಾ ಪ್ರಶ್ನೆ ಪುಸ್ತಿಕೆ ವಿತರಣೆ | ೦೯.೧೫ ಬೆಳ್ಳಿಗ್ಗೆ (ಭಾ.ಮಾ.ಕಾ) | ೧೦.೫೦ ಬೆಳ್ಳಿಗ್ಗೆ (ಭಾ.ಮಾ.ಕಾ) |
| ಪರೀಕ್ಷಾ ಪ್ರಶ್ನೆ ಪುಸ್ತಿಕೆ ತೆರವುಗೊಳಿಸಿ ಒ.ಎಂ.ಆರ್. ಹಾಳೆಯನ್ನು ಬೇರ್ಪಡಿಸಿ ಹೊರಗೆ ತೆಗೆಯುವುದು | ೦೯.೨೫ ಬೆಳ್ಳಿಗ್ಗೆ (ಭಾ.ಮಾ.ಕಾ) | ೧೦.೫೦ ಬೆಳ್ಳಿಗ್ಗೆ (ಭಾ.ಮಾ.ಕಾ) |
| ಪರೀಕ್ಷಾ ಕೊಠಡಿ ಒಳಗೆ ಪ್ರವೇಶ ಮಾಡಲು ಅಂತಿಮ ಕಾಲಾವಧಿ | ೦೯.೩೦ ಬೆಳ್ಳಿಗ್ಗೆ (ಭಾ.ಮಾ.ಕಾ) | ೧೧.೦೦ ಬೆಳ್ಳಿಗ್ಗೆ (ಭಾ.ಮಾ.ಕಾ) |
| ಪರೀಕ್ಷೆ ಪ್ರಾರಂಭ | ೦೯.೩೦ ಬೆಳ್ಳಿಗ್ಗೆ (ಭಾ.ಮಾ.ಕಾ) | ೧೧.೦೦ ಬೆಳ್ಳಿಗ್ಗೆ (ಭಾ.ಮಾ.ಕಾ) |
| ಪರೀಕ್ಷೆ ಮುಕ್ತಾಯ | ೧೦.೩೦ ಬೆಳ್ಳಿಗ್ಗೆ (ಭಾ.ಮಾ.ಕಾ) | ೦೧.೦೦ ಮಧ್ಯಾಹ್ನ (ಭಾ.ಮಾ.ಕಾ) |

**[ಭಾ.ಮಾ.ಕಾ – ಭಾರತೀಯ ಮಾನಕ ಕಾಲಮಾನ]**

**ಪ್ರಶ್ನೆ ಪುಸ್ತಿಕೆ ಮತ್ತು ಉತ್ತರಿಸಲು ಉಪಯೋಗಿಸುವ ಒ.ಎಂ.ಆರ್. ಹಾಳೆಯನ್ನು ಉಪಯೋಗಿಸುವಾಗ ಪಾಲಿಸಬೇಕಾದ ಸೂಚನೆಗಳು:**

ವಿತರಣೆ ಮಾಡಿದ ಪ್ರಶ್ನೆ ಪತ್ರಿಕಾ ಪುಸ್ತಿಕೆಗೆ ಮುದ್ರಿತ ಮುಚ್ಚಳಿಕೆ(Seal) ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಪುಸ್ತಿಕೆ ಒಳಗಡೆ ಉತ್ತರಿಸುವ ಒ.ಎಂ.ಆರ್. (OMR) ಇದೆಯೋ ಇಲ್ಲವೋ ಎಂಬುದನ್ನು ಸಹ ಖಚಿತಪಡಿಸಿಕೊಳ್ಳಬೇಕು. ಪುಸ್ತಿಕೆ ಮಾಡಿರುವ ಮುದ್ರಿತ ಮುಚ್ಚಳಿಕೆ(Seal) ಯನ್ನು ಕೊಠಡಿಯ ಮೇಲ್ವಿಚಾರಕರು ಸೂಚನೆ ನೀಡಿದ ನಂತರ ತೆರೆದು ಉತ್ತರಿಸುವ ಒ.ಎಂ.ಆರ್.ಹಾಳೆಯನ್ನು ಬೇರ್ಪಡಿಸಿಕೊಳ್ಳಬೇಕು, ಮೇಲ್ವಿಚಾರಕರು ಸೂಚನೆ ನೀಡುವ ಮುಂಚೆ ಯಾವುದೇ ಕಾರಣಕ್ಕೂ ಪ್ರಶ್ನೆ ಪತ್ರಿಕೆ ಮತ್ತು ಉತ್ತರಿಸುವ ಒ.ಎಂ.ಆರ್. ಪುಸ್ತಿಕೆಯನ್ನು ತೆರೆಯಬಾರದು. ಅಭ್ಯರ್ಥಿಗಳು ಪ್ರಶ್ನೆ ಪತ್ರಿಕಾ ಪುಸ್ತಿಕೆ ಮತ್ತು ಒ.ಎಂ.ಆರ್. ಹಾಳೆಯ ಅನುಕ್ರಮ ಸಂಖ್ಯೆಯನ್ನು ಗಮಸಿನಿ ರುಜುವಾತು ಮಾಡಿಕೊಳ್ಳಬೇಕು. ಒಂದು ಪಕ್ಷದಲ್ಲಿ ಅನುಕ್ರಮಸಂಖ್ಯೆಯಲ್ಲಿ ವ್ಯತ್ಯಾಸಗಳು ಕಂಡುಬಂದಲ್ಲಿ ತಕ್ಷಣವೇ ಕೊಠಡಿಯ ಮೇಲ್ವಿಚಾರಕರಿಗೆ ಹಿಂದಿರುಗಿಸಿ ಬದಲಿ ಮಾಡಿಕೊಂಡು ಅದೇ ಅನುಕ್ರಮಸಂಖ್ಯೆ ಇರುವ ಪುಸ್ತಿಕೆಯನ್ನು ಪರೀಕ್ಷಾ ಕೊಠಡಿಯಲ್ಲೇ ಪಡೆದುಕೊಳ್ಳಬೇಕು.

೧. ಪ್ರತಿಯೊಂದು ಪರೀಕ್ಷಾ ಪುಸ್ತಿಕೆ ಮತ್ತು ಉತ್ತರಿಸುವ ಒ.ಎಂ.ಆರ್. (OMR) ಹಾಳೆ ಮೇಲ್ಭಾಗದಲ್ಲಿ ಪೂರ್ವ ಮುದ್ರಿತ ಪರೀಕ್ಷಾ ಪುಸ್ತಿಕೆ ಸಂಕೇತ (Code) ಎ.ಬಿ.ಸಿ.ಡಿ (A,B,C,D) ನಮೂನೆಯಲ್ಲಿರುತ್ತದೆ. ಅಭ್ಯರ್ಥಿಗಳು ಪರೀಕ್ಷಾ ಪುಸ್ತಿಕೆ ಮತ್ತು ಒ.ಎಂ.ಆರ್. (OMR) ಹಾಳೆಯಲ್ಲಿ ಪೂರ್ವಮುದ್ರಿತ ಒಂದೇ ನಮೂನೆ ಸಂಕೇತ (Code) ಇದೆಯೋ, ಇಲ್ಲವೋ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು, ವ್ಯತ್ಯಾಸ ಕಂಡುಬಂದಲ್ಲಿ ಕೊಠಡಿ ಮೇಲ್ವಿಚಾರಕರ ಗಮನಕ್ಕೆ ತಂದು ಬದಲಿ ಪುಸ್ತಿಕೆ ಪಡೆದುಕೊಳ್ಳುವುದು.

೨. ಉತ್ತರಿಸಲು ನೀಡಿರುವ (OMR) ಹಾಳೆಯನ್ನು ವಿಶೇಷ ಮಾದರಿಯ ದೃಷ್ಟಿಸಾಧನ ಗಣಕಯಂತ್ರ (Optical Scanner) ದಿಂದ ಮೌಲ್ಯಮಾಪನ ಮಾಡಲಾಗುವುದು.

ಉತ್ತರಿಸಲು ನೀಡಿರುವ ಒ.ಎಂ.ಆರ್. (OMR) ಹಾಳೆಯ ಸಾಲುಗಳಲ್ಲಿ ಕೇಳಿರುವ ಕೆಳಕಂಡ ಮಾಹಿತಿಗಳನ್ನು ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ನುಗಳನ್ನು ಮಾತ್ರ ಉಪಯೋಗಿಸಿ ನೀಟಾಗಿ ಮತ್ತು ಸರಿಯಾಗಿ ತುಂಬಬೇಕು. ಪೆನ್ಸಿಲ್‌ನಿಂದ ತುಂಬುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

೧. ನೋಂದಣಿ ಸಂಖ್ಯೆ
೨. ಅಭ್ಯರ್ಥಿಯ ಹೆಸರು
೩. ತಂದೆಯ ಹೆಸರು
೪. ತಾಯಿಯ ಹೆಸರು
೫. ಕೇಂದ್ರದ ನಂಬರ್
೬. ಪರೀಕ್ಷಾ ಕೇಂದ್ರದ ಹೆಸರು ಮತ್ತು ಸಂಕೇತ
೭. ಅಭ್ಯರ್ಥಿಯ ಸಹಿ

ಉತ್ತರಿಸುವ ಒ.ಎಂ.ಆರ್. (OMR) ಹಾಳೆಯಲ್ಲಿ ಕೇಳಿರುವ ವಿವರಗಳನ್ನು ಮತ್ತು ಪ್ರತ್ಯುತ್ತರಗಳನ್ನು ಕಪ್ಪು/ನೀಲಿ ಬಾಲ್ ಪೆನ್ನುಗಳಲ್ಲಿ ಗುರುತು ಮತ್ತು ಭರ್ತಿ ಮಾಡುವ ವಿಧಾನಗಳನ್ನು ಈ ಕೆಳಗೆ ನೀಡಿರುವ ನಮೂನೆಯಲ್ಲಿ ಮಾಡಬೇಕು.

೧. ಪ್ರತಿಯೊಂದು ಪ್ರಶ್ನೆಗೆ ೦೪ ಪರ್ಯಾಯ ಉತ್ತರಗಳನ್ನು ಕೊಟ್ಟಿರುತ್ತದೆ. ಕೊಟ್ಟಿರುವ ೦೪ ಪರ್ಯಾಯ ಉತ್ತರಗಳಲ್ಲಿ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಿ ಗೋಳಾಕೃತಿ ಆಕಾರದಲ್ಲಿ ಕಪ್ಪು/ನೀಲಿ ಪೆನ್ನಿನಿಂದ ಸ್ಪಷ್ಟವಾಗಿ ಗುರುತು ಮಾಡಬೇಕು.

ಉದಾಹರಣೆಗೆ ಪುಸ್ತಿಕೆಯಲ್ಲಿ ಪ್ರಶ್ನೆಸಂಖ್ಯೆ ೦೫ನ್ನು ಈ ರೀತಿ ಕೇಳಲಾಗಿದೆ.

ತಾಜ್‌ಮಹಲ್ _______________ ಸ್ಥಳದಲ್ಲಿ ಕಟ್ಟಲಾಗಿದೆ.

೧. ದೆಹಲಿ

೨. ಮುಂಬಯಿ

೩. ಆಗ್ರಾ

೪. ಬೆಂಗಳೂರು

ಈ ಪ್ರಶ್ನೆಗೆ ಕೊಟ್ಟಿರುವ ೦೪ ಪರ್ಯಾಯ ಉತ್ತರಗಳಲ್ಲಿ ೦೩ನೇ ಉತ್ತರ ಸರಿಯಾಗಿರುತ್ತದೆ. ಅಭ್ಯರ್ಥಿಯು ಪ್ರಶ್ನೆ ಸಂಖ್ಯೆ ೦೫ನ್ನು ಗುರುತಿಸಿ, ಉತ್ತರಿಸುವ ಒ.ಎಂ.ಆರ್. (OMR) ಹಾಳೆಯಲ್ಲಿ ೦೩ನೇ ಉತ್ತರವನ್ನು ಈ ಕೆಳಗೆ ಕೊಟ್ಟಿರುವ ನಮೂನೆಯಲ್ಲಿ ಗುರುತು ಮಾಡಬೇಕು.

| | ೧ | ೨ | ೩ | ೪ |
|---|---|---|---|---|
| ೦೫. | ○ | ○ | ● | ○ |

೨. ಕೊಟ್ಟಿರುವ ಗೋಳಾಕೃತಿ ಆಕಾರದ ಪರ್ಯಾಯ ಉತ್ತರಗಳನ್ನು ಸಂಪೂರ್ಣವಾಗಿ ಸೂಕ್ತ ಗೋಳಾಕೃತಿ ಆಕಾರದಲ್ಲಿ ಗುರುತು ಮಾಡಲು ನೀಲಿ/ಕಪ್ಪು ಬಾಲ್ ಪೆನ್ನುಗಳನ್ನು ಮಾತ್ರ ಉಪಯೋಗಿಸಬೇಕು. ಉತ್ತರವನ್ನು ಒಮ್ಮೆ ಗುರುತು ಮಾಡಿದರೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಪೆನ್ಸಿಲ್‌ನಲ್ಲಿ ಗುರುತು ಮಾಡುವುದನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ. ಒಂದು ಪಕ್ಷದಲ್ಲಿ ಪೆನ್ಸಿಲ್‌ನ್ನು ಉಪಯೋಗಿಸಿ ಉತ್ತರಗಳನ್ನು ಗುರುತು ಮಾಡಿದರೆ ಅಂತಹ ಉತ್ತರಿಸುವ ಒ.ಎಂ.ಆರ್. ಹಾಳೆಗಳನ್ನು ಮೌಲ್ಯಮಾಪನದಿಂದ ತಿರಸ್ಕರಿಸಲಾಗುವುದು.

೩. ಕೊಟ್ಟಿರುವ ಆಯ್ಕೆ ಉತ್ತರಗಳನ್ನು ಮಬ್ಬು ಅಥವಾ ಕ್ಷೀಣ ಕಪ್ಪು/ನೀಲಿ ರೀತಿಯಲ್ಲಿ ಉತ್ತರಗಳನ್ನು ಗುರುತು ಮಾಡಿದರೆ ಮೌಲ್ಯಮಾಪನ ಮಾಡುವ ದೃಷ್ಟಿಸಾಧಕ ಗಣಕಯಂತ್ರ (Optical Scanner) ತಿರಸ್ಕರಿಸುತ್ತದೆ. ಆದ್ದರಿಂದ ಅಭ್ಯರ್ಥಿಗಳು ಆಯ್ಕೆ ಉತ್ತರಗಳನ್ನು ಅಚ್ಚುಕಟ್ಟಾಗಿ ಗುರುತು ಮಾಡಬೇಕು. ಬೇರೆ ಮಾದರಿಗಳಾದ ಅಪೂರ್ಣ/'X'/'✓' ನಮೂನೆಯಲ್ಲಿ ಗುರುತು ಮಾಡಿದರೆ ದೃಷ್ಟಿಸಾಧಕ ಗಣಕಯಂತ್ರ (Optical Scanner) ಮೌಲ್ಯಮಾಪನಕ್ಕೆ ಸ್ವೀಕಾರ ಮಾಡುವುದಿಲ್ಲ.

೩. ಸರಿಯಾಗಿ ಗುರುತು ಮಾಡುವ ವಿಧಾನ ಈ ಕೆಳಗೆ ತೋರಿಸಿದಂತೆ ಇರುತ್ತದೆ.

೨೧.  ● ○ ○ ○

೨೨.  ○ ● ○ ○

೨೩.  ○ ○ ● ○

೨೪.  ○ ○ ○ ●

೫. ಒಂದು ಪಕ್ಷದಲ್ಲಿ ಅಭ್ಯರ್ಥಿಯು ಕೊಟ್ಟಿರುವ ಯಾವುದೇ ಉತ್ತರಗಳಿಗೆ ಗುರುತು ಮಾಡಲು ಇಚ್ಛಿಸದಿದ್ದರೆ, ಹಾಗೆಯೇ ಖಾಲಿ ಬಿಡುವುದು.

೬. ಅಭ್ಯರ್ಥಿಗಳು ಉತ್ತರಿಸಿ ಒ.ಎಂ.ಆರ್. (OMR) ಹಾಳೆಯನ್ನು ಮಡಿಕೆ ಮಾಡಬಾರದು. ಮತ್ತು ಸರಿ ಹೊಂದದ ಗುರುತುಗಳನ್ನು ಮಾಡಬಾರದು.

೭. ನುಣಿಪಿಲ್ಲದ ಬರವಣಿಗೆ ಕಾರ್ಯ ಮಾಡಲು (Rough Work) ಅಭ್ಯರ್ಥಿಗಳು ಉತ್ತರಿಸುವ (OMR) ಹಾಳೆಯಲ್ಲಿ ಮಾಡಬಾರದು. ಎಲ್ಲಾ ನುಣಿಪಿಲ್ಲದ ಬರವಣಿಗೆ ಕಾರ್ಯವನ್ನು ಪರೀಕ್ಷಾ ಪುಸ್ತಿಕೆಯ ಹಾಳೆಯಲ್ಲೇ ಮಾಡಬೇಕು.

೮. ಒಮ್ಮೆ ಉತ್ತರಿಸಿದ ನಂತರ ಉತ್ತರಗಳನ್ನು ಬದಲಾವಣೆ ಮಾಡುವುದನ್ನು ನಿಷೇದಿಸಲಾಗಿದೆ.

ಅಭ್ಯರ್ಥಿಗಳು ಉತ್ತರಗಳನ್ನು ಆಯ್ಕೆ ಮಾಡುವ ಮೊದಲು ಉತ್ತರದ ನಿಖರತೆಯ ಬಗ್ಗೆ ತೃಪ್ತಿಕರವಾಗಿ ಖಚಿತಮಾಡಿಕೊಂಡ ನಂತರ ಸೂಕ್ತವಾದ ಉತ್ತರ ಆಯ್ಕೆ ಮಾಡಿಕೊಂಡು ಗೋಳಾಕೃತಿ ಆಕಾರದಲ್ಲಿ ಗುರುತು ಮಾಡುವುದು. ಒಮ್ಮೆ ಗುರುತು ಮಾಡಿದ ಉತ್ತರಗಳನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದನ್ನು ನಿಷೇದಿಸಲಾಗಿದೆ. ಉತ್ತರಿಸುವ ಒ.ಎಂ.ಆರ್. (OMR) ಹಾಳೆಯಲ್ಲಿ ಗುರುತು ಮಾಡಿದ ಉತ್ತರಗಳನ್ನು ಬದಲಾವಣೆ ಮಾಡಲು ಅಳಿಸುವ ರಬ್ಬರ್/ತಿದ್ದುವ ಬಿಳಿದ್ರವ ಉಪಯೋಗಿಸುವುದಕ್ಕೆ ಅನುಮತಿ ಇರುವುದಿಲ್ಲ. ಉತ್ತರಿಸಿದ ಒ.ಎಂ.ಆರ್. (OMR) ಹಾಳೆಗಳನ್ನು ಯಂತ್ರೀಕರಣದ ಮೂಲಕ ಮೌಲ್ಯಮಾಪನ ಮಾಡುವುದರಿಂದ ತಪ್ಪು ಮೌಲ್ಯಮಾಪನ ಗ್ರಹಿಕೆ ಮಾಡುವ ಸಂಭವವಿರುತ್ತದೆ.

ಕೊಟ್ಟಿರುವ ಪರ್ಯಾಯ ಉತ್ತರಗಳನ್ನು ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಗುರುತು ಮಾಡಿದರೆ ಅಥವಾ ಸರಿಯಾದ ವಿಧಾನವನ್ನು ಅನುಸರಿಸದೆ ಬೇರೆ ವಿಧಾನದಲ್ಲಿ ಗುರುತು ಮಾಡಿದರೆ, ಅಂತಹ ಉತ್ತರಗಳನ್ನು ತಪ್ಪು ಎಂದು ಪರಿಗಣಿಸಲಾಗುವುದು.

ಉತ್ತರಿಸಿದ ಒ.ಎಂ.ಆರ್. (OMR) ಹಾಳೆಗಳನ್ನು ಕೊಠಡಿ ಮೇಲ್ವಿಚಾರಕರಿಗೆ ಹಸ್ತಾಂತರಿಸುವ ಮೊದಲು ಹಾಗೂ ಪರೀಕ್ಷೆ ಕಾಲಾವಧಿ ಮುಕ್ತಾಯಗೊಂಡ ನಂತರ ರುಜುವಾತಿಗಾಗಿ ಹಾಜರಾತಿ

ಪತ್ರಕ್ಕೆ ಸಹಿ ಹಾಕುವುದು.  ಅಭ್ಯರ್ಥಿಗಳು ಪರೀಕ್ಷಾ ಪುಸ್ತಿಕೆಗಳನ್ನು ತಮ್ಮೊಡನೆ ಪರೀಕ್ಷೆ ನಂತರ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ.

**ಎಚ್ಚರಿಕೆ ಸೂಚನೆ:**

೧. ಪರೀಕ್ಷೆ ನಡೆಯುವ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಪುಸ್ತಿಕೆಯ ಪುಟಗಳನ್ನು ತೆಗೆದು ಬೇರೆ ಕಡೆ ಒಯ್ಯುವುದು, ಬೇರೆ ವ್ಯಕ್ತಿಗಳಿಂದ ಪರೀಕ್ಷೆ ಬರೆಸುವುದು ಕಂಡು ಬಂದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

೨. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ನಿಯಮ ಬಾಹಿರ ಪ್ರಕ್ರಿಯೆ ಮೂಲಕ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಪ್ರಚಾರ ಮತ್ತು ಒತ್ತಡ ತಂದರೆ ಇದು ಗಂಭೀರ ಪ್ರಕರಣ ಎಂದು ಪರಿಗಣಿಸಿ ಪರೀಕ್ಷೆಯಿಂದ ಅನರ್ಹಗೊಳಿಸಲಾಗುವುದು.

೩. ಕಾಲೇಜು/ಪರೀಕ್ಷಾ ಕೊಠಡಿಗಳಲ್ಲಿ ಯಾವುದೇ ತರಹದ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳ ಉಪಯೋಗಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.